
ಸಂಪುಟ 22 ಸಂಚಿಕೆ 33-34
ಆಗಸ್ಟ್ 20, 2000 ಬೆಲೆ ರೂ. 2.00

ದುಡಿವ ಜನರ ಪ್ರಾಣಮಿತ್ರ


ಪ್ರಜಾರಂಗ



ಡಾ|| ರಾಜ್ ಅಪಹರಣದ ಹಿಂದೆ-ಮುಂದೆ

ದಾವಣಗೆರೆ: ರೈತರ ಬೆಳೆ ನಾಶ

ಪ.ಬಂಗಾಳ: ತಲೆ ಎತ್ತಿರುವ ಭೂಮಾಲಿಕರ ದೌರ್ಜನ್ಯ



ಕಾಶ್ಮೀರ: ಜನತೆಗೆ ಬೇಕಾಗಿರುವುದು ಶಾಂತಿ

ಕೇರಳದಲ್ಲಿ ಪ್ರಜಾಪ್ರಭುತ್ವದ ಕೊಲೆ.....

ಕೇರಳದಲ್ಲಿ ಸಂವಿಧಾನ ಬದ್ಧವಾಗಿ ಚುನಾಯಿಸಲಾದ ಕಮ್ಯುನಿಸ್ಟ್ ಪಕ್ಷದ ಸರಕಾರವನ್ನು ಉರುಳಿಸಲಾದ ಬಗ್ಗೆ ಈ ಅಧ್ಯಾಯದಲ್ಲಿ ವಿವರಿಸುತ್ತೇನೆ.

ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಕೇರಳದಲ್ಲಿ ಏಕೈಕ ದೊಡ್ಡ ಪಕ್ಷವಾಗಿ ಹೊಮ್ಮಿದ ಕಮ್ಯುನಿಸ್ಟ್ ಪಕ್ಷ ರಾಜ್ಯದಲ್ಲಿ ಸರಕಾರವನ್ನು ರಚಿಸಿತು. ಜವಾಹರಲಾಲ್ ನೆಹರೂ ಪ್ರಧಾನಮಂತ್ರಿ ಆಗಿದ್ದರು. ಅವರ ಮಗಳು ಇಂದಿರಾಗಾಂಧಿ ಕಾಂಗ್ರೆಸ್ ಅಧ್ಯಕ್ಷೆ ಆಗಿದ್ದರು. ಕೇರಳದಲ್ಲಿ ಕಮ್ಯುನಿಸ್ಟರು ಅಧಿಕಾರಕೆ ಬರುವುದನ್ನು ತಡೆಯಲು ನೆಹರೂ ಮತ್ತು ಅವರ ಮಗಳು ಎಷ್ಟೆಲ್ಲ ಶ್ರಮಪಟ್ಟರು ಎನ್ನುವುದು ನಮಗೆಲ್ಲ ಗೊತ್ತಿದೆ. ಆದರೆ



ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಇ.ಎಂ.ಎಸ್.

ಅದರಲ್ಲಿ ಅವರು ಸಫಲರಾಗಲಿಲ್ಲ.

ಜನರ ಬೆಂಬಲ ಮತ್ತು ಪ್ರೋತ್ಸಾಹದ ಅಲೆಯ ನಡುವೆ ಕಾಮ್ರೇಡ್ ಇ.ಎಂ.ಎಸ್. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. 1959 ಜುಲೈ 31 ರಂದು ರಾಷ್ಟ್ರಪತಿ 356ನೇ ವಿಧಿಯನ್ನು ಬಳಸಿ ವಿಧಾನಸಭೆಯನ್ನು ವಜಾ ಮಾಡಿದರು.

ಕಮ್ಯುನಿಸ್ಟ್ ಸರಕಾರ ಕಾರ್ಯ ನಿರ್ವಹಿಸುವುದನ್ನು ತಡೆಯಲು ಅನೇಕ ತಂತ್ರಗಳನ್ನು ಅನುಸರಿಸಲಾಯಿತು. ಇಂದಿರಾಗಾಂಧಿ ಅಧ್ಯಕ್ಷತೆಯ ಕಾಂಗ್ರೆಸ್ ಪಕ್ಷ ಪ್ರತಿಗಾಮಿ ಮತ್ತು ಸಮಯಸಾಧಕ ಶಕ್ತಿಗಳು ಹಾಗೂ ಪಕ್ಷಗಳ ಜತೆ ಅಪವಿತ್ರ ಮೈತ್ರಿ ಮಾಡಿಕೊಂಡಿತು. ಕೇರಳ ಸರಕಾರ ತೊಲಗ ಬೇಕೆಂಬುದು ಜನಸಮುದಾಯದ ಇಚ್ಛೆಯಾಗಿದೆ ಎಂದು ಅಪಪ್ರಚಾರ ಮಾಡಲಾಯಿತು.

ಬಹಿರಂಗ ರಹಸ್ಯ!

ಪ್ರಧಾನಿ ನೆಹರೂ ಅವರು ಇ.ಎಂ.ಎಸ್. ರನ್ನು ಕರೆಸಿಕೊಂಡು ರಾಜಿನಾಮೆ ನೀಡಿ, ವಿಧಾನಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆಗೆ ಆದೇಶ ಕೊಡುವಂತೆ ಕೇಳಿಕೊಂಡಿದ್ದು ಬಹಳ ಗುಟ್ಟಿನ ವಿಷಯವೇನೂ ಅಲ್ಲ! ಆದರೆ ಪ್ರಧಾನಿಯ ಮಾತನ್ನು ಇ.ಎಂ.ಎಸ್. ಕೇಳಲಿಲ್ಲ. ಹೀಗಾಗಿ ಕಮ್ಯುನಿಸ್ಟ್ ಸರಕಾರವನ್ನು ಉರುಳಿಸುವ ಪ್ರಯತ್ನಗಳು ಮುಂದುವರಿದವು.

ಇ.ಎಂ.ಎಸ್. ನೇತೃತ್ವದ ಕೇರಳ ಸರ್ಕಾರದ ಪ್ರಗತಿಪರ ಧೋರಣೆ, ಭೂಸುಧಾರಣೆ ಮತ್ತು ಶಿಕ್ಷಣ ಪದ್ಧತಿ ಕುರಿತಂತೆ ಅದು ತಂದ ನಾನಾ ಮಸೂದೆಗಳು ಕೇರಳದ ಪಟ್ಟಭದ್ರ ಹಿತಾಸಕ್ತಿಗಳಲ್ಲಿ ನಡುಕವನ್ನು ಉಂಟುಮಾಡಿದವು. ಪಟ್ಟಭದ್ರ ಸ್ಥಾಪಿತ ಹಿತಾಸಕ್ತ ಶಕ್ತಿಗಳು ಕೇರಳ ಸರ್ಕಾರದ ವಿರುದ್ಧ ಆರಂಭಿಸಿದ ತಥಾಕಥಿತ ಜನಪ್ರಿಯ ಜನತಾ ಚಳುವಳಿ ರಾಜ್ಯದ ಜನತೆಯ ಬಹುಭಾಗವನ್ನು ತಲುಪಲಿಲ್ಲ.

ಯಾಕೆಂದರೆ ರಾಜ್ಯ ಸರ್ಕಾರವನ್ನು ರಕ್ಷಿಸುವ ಆಂದೋಲನ ಆ ವೇಳೆಗೆ ಇಡೀ ದೇಶದಲ್ಲಿ ಹಬ್ಬಿತ್ತು. ಕಾಂಗ್ರೆಸ್ ಪಕ್ಷ ಕೇರಳದಿಂದ ತೊಲಗಬೇಕೆಂಬುದು ಜನತೆಯ ಬೇಡಿಕೆಯಾಗಿತ್ತು!

ಕಮ್ಯುನಿಸ್ಟ್ ಸರಕಾರ ವಿರುದ್ಧ ಹರಿಬಿಡಲಾದ ಅಪಪ್ರಚಾರ ವಿಫಲವಾದಾಗ ವ್ಯಂತ್ಯ ಸರಕಾರದ ವಿರುದ್ಧ ನಡೆಸಲಾದ ಜನತಾ ಚಳುವಳಿ ಠುಸ್ ಎಂದಾಗ ಕೇಂದ್ರ ಸರಕಾರ ಹತಾಶವಾಗಿ ಸಂವಿಧಾನದ 356ನೇ ವಿಧಿಯನ್ನು ಬಳಸಿಕೊಂಡು ಕೇರಳದ ಮೇಲೆ ರಾಷ್ಟ್ರಪತಿ ಆಡಳಿತವನ್ನು ಹೇರಿತು.

ಇಎಂಎಸ್‌ಗೆ ಅಪೂರ್ವ ಸ್ವಾಗತ

ಜೂನ್ 6 ರಂದು ಕಾಂ. ಇ.ಎಂ.ಎಸ್. ಕಲ್ಕತ್ತಕೆ ಆಗಮಿಸಿದರು. ಅವರನ್ನು ಸ್ವಾಗತಿಸಲು ಮೈದಾನದಲ್ಲಿ ಸುಮಾರು ಎರಡು ಲಕ್ಷ ಜನರು ಜಮಾಯಿಸಿದ್ದರು. ದೇಶದ ಪ್ರಥಮ ಕಮ್ಯುನಿಸ್ಟ್ ಮುಖ್ಯಮಂತ್ರಿಯನ್ನು ಸ್ವಾಗತಿಸಲು ಮಹಿಳೆಯರು ಶಂಖಗಳನ್ನು ಊದಿದರು. ಕೇರಳದಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ನಿರ್ಧಾರ ಘೋಷಣೆಯಾದಾಗ ನಾನು ದೆಹಲಿಯಲ್ಲಿದ್ದೆ. ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ನಮ್ಮ ಕೆಲವು ದೂರಗಳುಳ್ಳ ಮನವಿ ಪತ್ರ ಅರ್ಪಿಸಲು ನಾವು ದೆಹಲಿಗೆ ಹೋಗಿದ್ದೆವು.


ಕೇರಳ ಸರಕಾರ ವಜಾ ಮಾಡಿದ ಕೇಂದ್ರ ಸರ್ಕಾರದ ಕ್ರಮವನ್ನು ಪ್ರತಿಭಟಿಸಿ ಆಗಸ್ಟ್ 7 ರಂದು ಕಲ್ಕತ್ತದಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಸಿಪಿಐ ರಾಷ್ಟ್ರೀಯ ಮಂಡಳಿ ಜುಲೈ 14 ರಂದು ಒಂದು ಗೊತ್ತುವಳಿಯನ್ನು ಅಂಗೀಕರಿಸಿತು. ಕೇರಳದಲ್ಲಿ ಮರು ಚುನಾವಣೆಯ ಪ್ರಸ್ತಾವನ್ನು ಅದು ತಳ್ಳಿ ಹಾಕಿತು.

ಬುದ್ಧಿಜೀವಿಗಳ ಮನವಿ

ತ್ರಿಗುಣ ಸೇನ್, ಪತ್ರಕರ್ತ ವಿವೇಕಾನಂದ ಮುಖರ್ಜಿ, ಡಾ. ಪರೇಶ್ ಚಂದ್ರ ಸೇನ್, ಸತ್ಯಜಿತ್ ರೇ, ಸುಶೋಭನ ಸರ್ಕಾರ್, ಹೇಮಂತ ಮುಖರ್ಜಿ, ಗೋಪಾಲ ಚಂದ್ರ ಹಲ್ದರ್, ಶಂಭುಮಿತ್ರ, ಮಹಿರ ಸೇನ್, ಬಿನಯ್ ಘೋಷ್, ಅಸಿತ್ ಬರನ್, ಸುಚಿತ್ರ ಮಿತ್ರಾ, ಮೃಣಾಲ್ ಸೇನ್, ಋತ್ವಿಕ್ ಘಟಕ್, ನಂದಗೋಪಾಲ್ ಸೇನ್ ಗುಪ್ತ ಮೊದಲಾದ ಬುದ್ಧಿಜೀವಿಗಳು 1959 ಜುಲೈ 15 ರಂದು ರಾಷ್ಟ್ರಪತಿಗೆ ಒಂದು ಮನವಿ ಸಲ್ಲಿಸಿದರು.

ಅಪವಿತ್ರ ಮಾರ್ಗಗಳಿಂದ ಕೇರಳ ಸರ್ಕಾರವನ್ನು ಉರುಳಿಸಲು ಒಂದಾಗಿರುವವರು ಭಾರತೀಯ ಪ್ರಜಾಪ್ರಭುತ್ವದ ಬುಡಕೇ ಕೊಡಲಿಯೇಟು ಹಾಕಿದ್ದಾರೆ. ಇಂಥ ಪ್ರಯತ್ನಗಳನ್ನು ತಕ್ಷಣವೇ ನಿಲ್ಲಿಸಬೇಕೆಂದು ನಾವು ಮನವಿ ಮಾಡುತ್ತೇವೆ ಎಂಬುದು ಬುದ್ಧಿಜೀವಿಗಳ ಕರೆಯಾಗಿತ್ತು.

ನಾಟಕಕಾರ ಬಜನ್ ಭಟ್ಟಾಚಾರ್ಯ,ನವ ಭಾನು ಬ್ಯಾನರ್ಜಿ ಮತ್ತು ವಿಜ್ಞಾನಿ ಬಿ.ಡಿ. ನಾಗ್‌ಚೌಧರಿ ಒಂದು ಪ್ರತ್ಯೇಕ ಮನವಿಯನ್ನು ರಾಷ್ಟ್ರಪತಿಗೆ ಕಳುಹಿಸಿಕೊಟ್ಟಿತು. ಕೇರಳದಲ್ಲಿ ಹಸ್ತಕ್ಷೇಪಕೆ ಅವಕಾಶ ಕೊಡುವುದಿಲ್ಲ ಎನ್ನುವುದು ಆ ಮನವಿಯ ಶೀರ್ಷಿಕೆಯಾಗಿತ್ತು. ಇದೇ ಸಂದೇಶ ಹೊತ್ತ ಕಲತ್ತದ 17,336 ನಿವಾಸಿಗಳು ಸಹಿ ಮಾಡಿದ ಮನವಿಯೊಂದನ್ನು 1959 ಜುಲೈ 15 ರಂದು ರಾಷ್ಟ್ರಪತಿಗೆ ರವಾನಿಸಲಾಯಿತು.



ಪಕ್ಷದ ಪಶ್ಚಿಮ ಬಂಗಾಳ ಘಟಕ ಜುಲೈ 3 ರಂದು ಸ್ಮಾರಕದ ಬಳಿ ಒಂದು ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಂಡ ರ್‍ಯಾಲಿಯನ್ನು ನಡೆಸಿತು. ಇಂದ್ರಜಿತ್ ಗುಪ್ತ ಮತ್ತು ನಾವು ಮಾತನಾಡಿದೆವು. ಫಾರ್ವರ್ಡ್ ಬ್ಲಾಕ್(ಮಾರ್ಕ್ಸಿಸ್ಟ್) ನ ಅಮಾರ ಬೋಸ್ ಅಧ್ಯಕ್ಷತೆ ವಹಿಸಿದ್ದರು.

ಭ್ರಮನಿರಸನ ಬೇಡ...

ಈಗ ಬೇಕಾಗಿರುವುದು ಭ್ರಮನಿರಸನವಲ್ಲ, ಕಾಂಗ್ರೆಸ್‌ನ ಸರ್ವಾಧಿಕಾರದ ವಿರುದ್ಧ ದೃಢತೆ ಮತ್ತು ಶಿಸ್ತಿನಿಂದ ಪ್ರಜಾಪ್ರಭುತ್ವ ಶಕ್ತಿಗಳ ರಕ್ಷಣೆ ಮಾಡಬೇಕಾಗಿದೆ ಎಂದು ನಾನು ಹೇಳಿದೆ. ಇದಕ್ಕಾಗಿ ಒಂದು ಬಲಿಷ್ಠ ಆಂದೋಲನದ ಅಗತ್ಯವಿದೆ ಎಂದೆ.

ಈ ರ್‍ಯಾಲಿ ನಡೆದ ದಿನವೇ, ಕೇರಳ ರಾಜ್ಯಪಾಲರ ವರದಿಯನ್ನು ಲೋಕಸಭೆಯಲ್ಲಿ ಮಂಡಿಸಬೇಕೆಂಬ ಬೇಡಿಕೆಯನ್ನು ಸರಕಾರ ತಿರಸ್ಕರಿಸಿದಾಗ ಬಹುತೇಕ ಪ್ರತಿಪಕ್ಷ ಸದಸ್ಯರು ಲೋಕಸಭೆಯಲ್ಲಿ ಸಭಾತ್ಯಾಗ ಮಾಡಿದರು.. ಆಗ ಎಸ್.ಎ.ಡಾಂಗೆ ಕಮ್ಯುನಿಸ್ಟ್ ಸಂಸದೀಯ ಪಕ್ಷದ ನಾಯಕರಾಗಿದ್ದರು.

ದೆಹಲಿಗೆ ಹೋಗುವುದಕೆ ಸ್ವಲ್ಪ ಮುಂಚೆ ನಾನು ಮುಖ್ಯಮಂತ್ರಿ ಡಾ. ರಾಯ್‌ರನ್ನು ಭೇಟಿ ಮಾಡಿದ್ದೆ. ಕೇರಳದಲ್ಲಿ ಕಾಂಗ್ರೆಸ್ ಅನುಸರಿಸುತ್ತಿರುವ ತಂತ್ರಕ್ಕೆ ತಮ್ಮ ವಿರೋಧವಿದೆ ಎಂದು ಅವರು ನನಗೆ ತಿಳಿಸಿದರು. ಅದೇ ರೀತಿ ಚುನಾಯಿತ ಸರಕಾರವೊಂದಕ್ಕೆ ಕಿರುಕುಳ ಕೊಡುವುದನ್ನು ಅವರು ವಿರೋಧಿಸಿದರು. ಡಾ. ರಾಯ್ ತಮ್ಮ ನಿಲುವನ್ನು ಕಾಂಗ್ರೆಸ್ ಕಾರ್ಯ ಸಮಿತಿಗೆ(ಸಿಡಬ್ಲ್ಯುಸಿ)ಗೆ ಕೂಡ ತಿಳಿಸಿದ್ದರು.

ಸರಕಾರವನ್ನು ನಡೆಸಲು ಕಠಿಣವಾಗಿ ವರ್ತಿಸಬೇಕಾಗುತ್ತದೆ ಎಂದು ಡಾ. ರಾಯ್ ನನ್ನ ಬಳಿ ಹೇಳಿದ್ದರು. ಒಂದು ವೇಳೆ ನೀವೇ ಇ.ಎಂ.ಎಸ್. ಆಗಿದ್ದಿದ್ದರೆ ಏನು ಮಾಡುತ್ತಿದ್ದಿರಿ ಎಂದು ನಾನು ಪ್ರಶ್ನಿಸಿದೆ.

ಎಲ್ಲಾ ಚಳುವಳಗಾರರನ್ನು ನಾನು ಬಂಧಿಸುತ್ತಿದ್ದೆ ಹಾಗೂ ಕಟ್ಟುನಿಟ್ಟಿನ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತಿದ್ದೆ ಎಂಬುದು ರಾಯ್ ಅವರ ಉತ್ತರವಾಗಿತ್ತು. ಆದರೆ ಕಾಂಗ್ರೆಸ್ ಮುಖ್ಯಮಂತ್ರಿ ಹೇಳಿದ ಆ ಬಲವಾದ ಆಡಳಿತಾತ್ಮಕ ಕ್ರಮ ಗಳಿಗೆ ನಾವು ಬಲಿಯಾದೆವು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ.

ದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ನಂತರ ನಾನು ಮತ್ತು ಭೂಪೇಶ ಗುಪ್ತ, ಫಿರೋಜ್ ಗಾಂಧಿಯವರನ್ನು ಭೇಟಿ ಮಾಡಲು ಹೋದೆವು. ಅವರು ಆಗ ಪ್ರಧಾನಮಂತ್ರಿಯವರ ನಿವಾಸದಲ್ಲಿ ಉಳಿದುಕೊಂಡಿರಲಿಲ್ಲ. ಸಂಸತ್ ಸದಸ್ಯರಿಗೆ ಕೊಡಲಾಗುವ ಒಂದು ಫ್ಲಾಟ್‌ನಲ್ಲಿ ಇದ್ದರು.

ನಮಗೆ ಕುಳಿತುಕೊಳ್ಳುವಂತೆ ಹೇಳಿ ಫಿರೋಜ್‌ಗಾಂಧಿ ಇವತ್ತು ಒಂದು ಕೊಲೆ ನಡೆದಿದೆ. ಕೇರಳದಲ್ಲಿ ಪ್ರಜಾಪ್ರಭುತ್ವದ ಕೊಲೆ ಆಗಿದೆ ಎಂದರು.

ಫಿರೋಜ್‌ಗಾಂಧಿ ಬಗ್ಗೆ ನಾನು ಆಗಲೇ ಈ ಪುಸ್ತಕದಲ್ಲಿ ಸ್ವಲ್ಪ ಬರೆದಿರುವೆ. ಆ ಭೇಟಿಯ ವೇಳೆ ಫಿರೋಜ್ ನಮಗೆ ಇನ್ನೂ ಕೆಲವು ಕತೆ ಗಳನ್ನು ಹೇಳಿದರು. ಅವುಗಳ ಪ್ರಸ್ತಾಪ ಇಲ್ಲಿ ಬೇಕಿಲ್ಲ.

(ಭಾರತ - ಚೀನಾ: ಕಹಿಯಾದ ಸಂಬಂಧ-ಮುಂದಿನ ಸಂಚಿಕೆಯಲ್ಲಿ

ಹಿಂದಿನ ಸಂಚಿಕೆಯಲ್ಲಿ ಪ.ಬಂಗಾಳದಲ್ಲಿ ಆಹಾರ ಚಳುವಳಿಗಳು ಹಾಗೂ ಆಡಳಿತರೂಢ ಕಾಂಗ್ರೆಸ್ ಸರ್ಕಾರದ ದಮನಕಾರಿ ಕ್ರಮಗಳಿಗೆ ಮಣಿಯದ ಜನಾಂದೋಲನದ ಬಗ್ಗೆ ಓದಿರುವಿರಿ ಈ ಸಂಚಿಕೆಯಲ್ಲಿ ಕೇರಳದಲ್ಲಿ ನಡೆದ ಪ್ರಜಾಪ್ರಭುತ್ವದ ಕಗ್ಗೊಲೆ ಬಗ್ಗೆ ಓದಿ

ಪಶ್ಚಿಮ ಬಂಗಾಳದಲ್ಲಿ ಮತ್ತೆ ಹೆಡೆ ಎತ್ತುತ್ತಿರುವ ಭೂಮಾಲಕ ಕ್ರೌರ್ಯ

ನಿತ್ಯಾನಂದ ಸ್ವಾಮಿ

ಪಶ್ಚಿಮ ಬಂಗಾಳದಲ್ಲಿ ಮಾಜಿ ಭೂಮಾಲಕರು ಮತ್ತೆ ಎದ್ದೇಳುತ್ತಿದ್ದಾರೆ. ಎಡರಂಗ ಸರ್ಕಾರವು ಜಾರಿಗೆ ತಂದ ಪ್ರಗತಿಪರ ಭೂಸುಧಾರಣೆಗಳಿಂದ ತಮ್ಮ ಹೆಚ್ಚುವರಿ ಭೂಮಿಯನ್ನು ಕಳೆದುಕೊಂಡ ಇವರು ಗಾಯಗೊಂಡ ಸರ್ಪದಂತೆ ತಮ್ಮ ರೋಷವನ್ನು ಉಳಿಸಿಕೊಂಡು ಬಂದವರು. ಇವರ ಸೇಡಿನ ಕಿಡಿಗಳು ತೃಣಮೂಲ ಎಂಬ ಕಾಂಗ್ರೆಸ್ ಬೀಸುತ್ತಿರುವ ಹಿಂಸಾಚಾರ ಪ್ರಚೋದಕ ಬಿರುಗಾಳಿಗೆ ಹೊತ್ತಿ ಉರಿಯಲಾರಂಭಿಸಿವೆ. ಕೇಂದ್ರದಲ್ಲಿ ಸರ್ಕಾರದ ಭಾಗವಾಗಿರುವ ತೃಣಮೂಲ ಕಾಂಗ್ರೆಸ್ಸಿನ ನೆರವಿನೊಂದಿಗೆ ತಾವು ಕಳೆದುಕೊಂಡ ಭೂಮಿಯನ್ನು ಮರಳಿ ಪಡೆಯುವ ಕನಸು ಕಾಣುತ್ತಿರುವ ಈ ಹತಾಶ ಶಕ್ತಿಗಳು ತೃಣಮೂಲ ಕಾಂಗ್ರೆಸ್ ಸೃಷ್ಟಿಸಿರುವ ಗೂಂಡಾಪಡೆಯ ನೆರವಿನೊಂದಿಗೆ ರೈತರನ್ನು ಹಾಗೂ ಲಾವಣಿದಾರರನ್ನು ಬಲವಂತವಾಗಿ ಒಕ್ಕಲೆಬ್ಬಿಸುವ ಪ್ರಯತ್ನ ಮಾಡತೊಡಗಿದ್ದಾರೆ.

ಜುಲೈ 27 ರಂದು ಬಿರ್‌ಭೂಮ್ ಜಿಲ್ಲೆಯಲ್ಲಿ ನಡೆದದ್ದು ಇಷ್ಟೇ. ನಬಸ್ತಾ ಎಂಬ ಗ್ರಾಮದ ಭೂಮಾಲಕ ಬಾಬು ಮಿಯಾಂ ಎಂಬವನು ಹೊಂದಿದ್ದ ಸುಮಾರು 500 ಎಕರೆ ಭೂಮಿಯಲ್ಲಿ 111 ಎಕರೆ ಹೆಚ್ಚುವರಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಭೂಹೀನ ಕೃಷಿಕೂಲಿಕಾರರಿಗೆ ವಿತರಣೆ ಮಾಡಿತ್ತು. ಸರ್ಕಾರದ ಕ್ರಮವನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸುವ ಮೂಲಕ ತನ್ನ ಭೂಮಿಯನ್ನು ಮರಳಿ ಪಡೆಯಲು ಈತನು ಮಾಡಿದ ಪ್ರಯತ್ನ ವಿಫಲವಾಗಿತ್ತು. ಇತ್ತೀಚೆಗೆ ತೃಣಮೂಲ ಕಾಂಗ್ರೆಸ್ಸಿನ ಬೆಂಬಲದ ಭರವಸೆಯೊಂದಿಗೆ ಭೂಮಿಯ ಹಕ್ಕು ಪತ್ರ ಹೊಂದಿರುವ ಕೃಷಿಕೂಲಿಕಾರರನ್ನು ಬಲವಂತವಾಗಿ ಹೊರ ಹಾಕುವ ಯೋಜನೆ ಯೊಂದನ್ನು ಸಿದ್ಧಪಡಿಸಿ ಕೊಂಡಿದ್ದನು. ಜುಲೈ 27 ರ ಬೆಳಿಗ್ಗೆ ಬರ್ದ್ವಾನ್ ಮತ್ತು ಮುರ್ಷಿದಾಬಾದ್ ನಗರಗಳಿಂದ ತೃಣಮೂಲ ಕಾಂಗ್ರೆಸ್ಸಿನ ಗೂಂಡಾ ಪಡೆಯ ನೂರಾರು ಜನಗಳನ್ನು ನಾನೂರು ಗ್ರಾಮಕೆ ನುಗ್ಗಿಸಲಾಯಿತು. ಗದ್ದೆಗಳಲ್ಲಿ ಉಳುಮೆ ಮಾಡುತ್ತಿರುವವರ ಮೇಲೆ ದಾಳಿ ಮಾಡಿ ಅವರನ್ನು ಓಡಿಸುವುದು ಅವರ ಉದ್ದೇಶವಾಗಿತ್ತು. ಪರಿಸ್ಥಿತಿಯ ಗಂಭೀರತೆಯನ್ನು ತಕ್ಷಣವೇ ಮನಗಂಡ ಮೂರುನಾಲ್ಕು ಗ್ರಾಮಗಳ ರೈತರು ಹಾಗೂ ಕೃಷಿಕೂಲಿಕಾರರು ತಮ್ಮ ಜೀವದ ಹಂಗು ತೊರೆದು ಹೊರಗಿನಿಂದ ಬಂದ ಆಕ್ರಮಣಕಾರರನ್ನು ಸುತ್ತುವರೆದರು. ಇಂದು ನಾನೂರು ಗ್ರಾಮಸ್ಥರಿಗಾದದ್ದು ನಾಳೆ ನಮಗೂ ಆಗಲಿದೆ ಎಂಬ ಅಂದಾಜು ಅವರಲ್ಲಿ ಸ್ವಯಂ ಪ್ರೇರಣೆಯ ಒಗ್ಗಟ್ಟನ್ನು ಬೆಸೆಯಿತು. ಒಂದು ಗಂಟೆಗೂ ಹೆಚ್ಚುಕಾಲ ನಡೆದ ಕಾಳಗದಲ್ಲಿ ಬಹಳಷ್ಟು ರಕ್ತ ಹರಿಯಿತು. ಪ್ರಾಣವನ್ನಾದರೂ ಕೊಟ್ಟೇವು, ಆದರೆ ಭೂಮಿಯನ್ನು ಮಾತ್ರ ಬಿಡುವುದಿಲ್ಲ ಎಂಬ ಪಣದೆದುರು ಬಾಡಿಗೆ ಗೂಂಡಾಗಳ ಗುಂಡಿಗೆಗಳು ನಡುಗಿಹೋದವು. ಹೆಣವಾದವರನ್ನು ತೃಣ ಮೂಲ ಕಾಂಗ್ರೆಸ್ಸಿನ ಧ್ವಜಗಳಿಂದ ಮುಚ್ಚಲಾಯಿತು. ಮಮತಾ ಬ್ಯಾನರ್ಜಿ ಬಂದು ಕಣ್ಣೀರು ಹಾಕುವ ನಾಟಕ ಏರ್ಪಾಡಾಯಿತು. ಸೇಡಿಗೆ ಸೇಡು ನೆಪದಲ್ಲಿ ರಾಜ್ಯಾದ್ಯಂತ ದಂಗೆಯೆಬ್ಬಿಸಲು ಪ್ರಚೋದನೆ ನೀಡಲಾಯಿತು.

ಘಟನೆಗೆ ರಾಜಕೀಯ ಬಣ್ಣ ಬಳಿಯುವ ಪ್ರಯತ್ನ ತಕ್ಷಣದಿಂದಲೇ ಆರಂಭವಾಯಿತು. ಇದೊಂದು ಎರಡು ರಾಜಕೀಯ ಪಕ್ಷಗಳ ನಡುವಿನ ಘರ್ಷಣೆಯಾಗಿದೆ ಎಂದು ಪತ್ರಿಕೆಗಳು ದೊಡ್ಡ ದೊಡ್ಡ ಅಕ್ಷರಗಳಲ್ಲಿ ರಂಜಿತ ವರದಿಗಳನ್ನು ಪ್ರಕಟಿಸಿದವು. ಅಪಾರ ತ್ಯಾಗ ಬಲಿದಾನಗಳಿಂದ ಭೂಮಿಯ ಹಕ್ಕನ್ನು ಪಡೆದುಕೊಂಡಿದ್ದ ಭೂಹೀನ ಬಡವರಿಂದ ಭೂಮಿಯನ್ನು ಕಿತ್ತು ಕೊಳ್ಳಲು ಮಾಜಿ ಭೂಮಾಲಕರು ಆರಂಭಿಸಿರುವ ದೌರ್ಜನ್ಯ ಇದಾಗಿದೆ ಎಂಬುದನ್ನು ವ್ಯವಸ್ಥಿತವಾಗಿ ಮರೆಮಾಚಲಾಯಿತು. ತೃಣಮೂಲ ಕಾಂಗ್ರೆಸ್ಸಿನ ಸುತ್ತ ಅಣಿನೆರೆಯುತ್ತಿರುವ ಭೂಮಾಲಕ ಶಕ್ತಿಗಳು

ಪುಟ 8 ಕ್ಕೆ

ಕರ್ನಾಟಕ ಈ ವಾರ

ಮುಖ ಬದಲಾಯಿಸಿಕೊಂಡ ಬಿಜೆಪಿ

ಬಸವರಾಜ ಪಾಟೀಲ್ ಸೇಡಂ ಎಂಬುವರೀಗ ಬಿಜೆಪಿಯ ಹೊಸ ರಾಜ್ಯ ಸಮಿತಿ ಅಧ್ಯಕ್ಷ. ಕೇಂದ್ರದಲ್ಲಿಯೂ ಪಕ್ಷದ ಅಧ್ಯಕ್ಷ ಹುದ್ದೆ ಬಂಗಾರು ಲಕ್ಷ್ಮಣರೂ ಎಂಬ ದಲಿತನಿಗೆ ನೀಡಲಾಗಿದೆಯೆಂದು ರಂಗು ರಂಗಾಗಿ ವರ್ಣಿಸುತ್ತಿದ್ದಾರೆ. ಇದು ಹೊಸ ವೇಷ ಹಾಗೂ ಉತ್ತರ ಪ್ರದೇಶದ ಚುನಾವಣೆಗಳ ಮೇಲೆ ಕಣ್ಣಿರಿಸಲಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಇಬ್ಬರ ಆತ್ಮಗಳಿರುವುದು ನಾಗಪುರದ ಖಾಕಿ ಚಡ್ಡಿ, ಲಾಠಿಗಳ ಗುಡಾಣದಲ್ಲಿ. ಪಕ್ಷದಲ್ಲಿ ಚುನಾವಣೆ ನಡೆದಿವೆಯೆಂದರೂ ನಿಜವಾದ ಅರ್ಥದಲ್ಲಿ ಎಲ್ಲವೂ ಪೂರ್ವ ನಿರ್ಧರಿತ. ಆದರದಕೆ ಒಮ್ಮತವೆಂಬ ಕವಚ. ಆದಾಗ್ಯೂ ಬಿಜೆಪಿಯ ಈ ಬಾರಿ ಚುನಾವಣೆಗಳು ಅಷ್ಟು ಸರಳ ಇರಲಿಲ್ಲ. ರಾಜ್ಯದ ಜಿಲ್ಲೆ ಜಿಲ್ಲೆಗಳಲ್ಲಿಯೂ ನಡೆದ ಸಭೆಗಳಲ್ಲಿ ಮುನಿಸು-ಮುಷ್ಠಿಯುದ್ಧಗಳಂತಹ ಬಡಿದಾಟಗಳು ನಡೆದವು. ರಾಜ್ಯದ ನಾಯಕರು ತಮ್ಮ ಗುಂಪಿನವರನ್ನೇ ಆಡಿಸಲು ಮುಂದಾದರು ರಾಜ್ಯ ಮಟ್ಟದಲ್ಲಿಯೂ ಇದು ಕ್ಲೈಮ್ಯಾಕ್ಸ್ ಹಂತ ತಲುಪುವುದಿತ್ತು. ಹೀಗಾಗಿ ರಾಜ್ಯದಲ್ಲಿ ಬಿಜೆಪಿ ಪಿತ ನೆಂದು ಕರೆಸಿಕೊಂಡು ಖುಷಿಗೊಳ್ಳುತ್ತಿದ್ದ ಯಡಿಯೂರಪ್ಪನವರು ಮರು ಆಯ್ಕೆ ಬಯಸಿದ್ದರೂ, ರಾಜ್ಯದಲ್ಲಿ ಬಿಜೆಪಿ ಅನುಭವಿಸಿದ ಹೀನಾಯ ಸೋಲುಗಳೂ, ಕೇಂದ್ರದ ವಾಜಪೇಯಿ ಎಂಬ ವರ್ಚಸ್ವಿ ನಾಯಕರ ಸರಕಾರದ ವಿನಾಶಕಾರಿ ನೀತಿಗಳಿಂದಾಗಿ ತಿರಸ್ಕಾರಕ್ಕೆ ಒಳಗಾಗಿ



ಉತ್ತರ ಕರ್ನಾಟಕದ ಜನರಿಗೆ ಮತ್ತೆ ಅನ್ಯಾಯ - ಅವರು ಕೇಳಿದ್ದು ಹೈಕೋರ್ಟ್ ಪೀಠ, ಆದರೆ ಸಿಕ್ಕಿದ್ದು ಕಾಂಗ್ರೆಸ್, ಬಿಜೆಪಿ ಅಧ್ಯಕ್ಷ ಪೀಠಗಳು !

ಪೂರ್ತಿ ಬಣ್ಣ ಬಯಲಾಗುತ್ತಿರುವ ಸ್ಥಿತಿಯಲ್ಲಿ ಹೊಸ ಮುಖ ದಿಂದ ಬಿಜೆಪಿಯ ಮುಖ ಉಳಿಸಿಕೊಳ್ಳಲು ಲೆಕ್ಕ ಹಾಕಿದ್ದಾರೆ. ನೀತಿಗಳನ್ನು ಬದಲಾಯಿಸಿ ದುರುಳ ನೀತಿಗಳನ್ನು ಉಳಿಸಿ ಪಾಲಿಸುವ ಹುನ್ನಾರ ಕೈ ಬಿಡಲು ಇವರು ಸಿದ್ಧರಿಲ್ಲ. ತಾನು ಯಾರ ನೆರಳು ಅಲ್ಲ, ತಾನೇ ಸ್ವತಂತ್ರ ತಾನೇನು ಎಂಬುದನ್ನು ತೋರಿಸುತ್ತೇನೆ ಎಂದು ಸ್ಪಷ್ಟನೆ ನೀಡಿರುವ ಸೇಡಂರವರು ಮರುಕ್ಷಣದಲ್ಲೇ ಸಂಘ ಪರಿವಾರದ ನಿಷ್ಠ ಸದಸ್ಯನೆಂದು ಥಟ್ಟನೆ ಉತ್ತರಿಸಿರುವುದು ಗಮನಾರ್ಹ. ತಾನು ಶಿಸ್ತಿನ ಸಿಪಾಯಿ, ಅಶಿಸ್ತು ಸಹಿಸುವುದಿಲ್ಲ ಎಂದು ಯಡಿಯೂರಪ್ಪ, ಅನಂತಕುಮಾರ್, ಶೆಟ್ಟರ್ ಸಮ್ಮುಖದಲ್ಲಿ ಸೇಡಂ ಮಾತನಾಡಿದ್ದು ಬಿ.ಬಿ.ಶಿವಪ್ಪನವರ ಬಣವನ್ನು ನೋಡಿಯೇ ಎಂಬ ಗುಸುಗುಸು ಬಿಜೆಪಿಯಲ್ಲಿನ ಗುಂಪುಗಾರಿಕೆಯನ್ನು ಹೊರಹಾಕಿದೆ. ಏನೊಂದು ಅಭಿವೃದ್ಧಿಗಾಗಿ ಯತ್ನಿಸದಿದ್ದರೂ ತಾವು ಉತ್ತರ ಕರ್ನಾಟಕದ ಪಕ್ಷಪಾತಿಗಳೆಂದೇ ಸೇಡಂ ಆಯ್ಕೆ ಮಾಡಲಾಗಿದೆಯೆಂದು ಬಿಂಬಿಸುತ್ತಿರುವ ಬಿಜೆಪಿ ನಾಯಕರ ವರಸೆ ಹಾಸ್ಯಾಸ್ಪದವಾಗಿದೆ.

ಹಣಸುಲಿಯುವ ದಂಧೆಯಾಗಿರುವ ಆರೋಗ್ಯ ವ್ಯವಸ್ಥೆ

ಲೇಖಕ ಕೃಷ್ಣ ಮಾಸಡಿಯವರ ಮಗುವೊಂದು ವೈದ್ಯರ ನಿರ್ಲಕ್ಷ್ಯತನದಿಂದ ಸಾವನ್ನಪ್ಪಿದ ದಾರುಣ ಘಟನೆ ಸಂಭವಿಸಿದೆ. ತುಮಕೂರಿನ ನರ್ಸಿಂಗ್ ಹೋಂನಲ್ಲಿ ವೈದ್ಯ ನಿರ್ಲಕ್ಷ್ಯದ ಹಾಗೂ ತಪ್ಪು ಶುಶ್ರೂಷೆ ಮತ್ತು ವಿಳಂಬದಿಂದ ಬಾಲಕನ ಮುರಿದಿದ್ದ ಕಾಲನ್ನೇ ಕತ್ತರಿಸಬೇಕಾಗಿ ಬಂತು. ಇತ್ತೀಚೆಗೆ ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿದ ವೈದ್ಯರು ಕತ್ತರಿ ಒಳಗೆ ಇಟ್ಟು ಹೊಲಿಗೆ ಹಾಕಿದ್ದರು. ಇನ್ನೊಬ್ಬನಿಗೆ ಅಪೆಂಡಿಟೈಟಿಸ್ ರೋಗಕ್ಕೆ ನಾಲ್ಕು ಬಾರಿ ಶಸ್ತ್ರ ಚಿಕಿತ್ಸೆ ಮಾಡಿದ್ದರಿಂದ ಸೋಂಕು ರೋಗಕ್ಕೆ ಈಡಾಗಬೇಕಾಯ್ತು. ಪೋಲೀಸ್ ಕಾನ್‌ಸ್ಟೇಬಲ್ ಒಬ್ಬರಿಗೆ ಇದ್ದದ್ದು ಮೂಲವ್ಯಾಧಿ, ಆದರೆ ಕೊಯ್ದದ್ದು ಹೊಟ್ಟೆಯನ್ನು... ಇವು ಒಂದೇ ಎರಡೇ ಇವು ಹೊರಬಂದ ಪ್ರಕರಗಳಷ್ಟೇ.


ಹೀಗೆ ಸರ್ಕಾರಿ ಹಾಗೂ ಖಾಸಗೀ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳ ತೀವ್ರತರ ತಾತ್ಸಾರ, ನಿರ್ಲಕ್ಷದಿಂದ ಸಾವು-ನೋವಿಗೆ ಈಡಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಜಿಲ್ಲೆ ಜಿಲ್ಲೆಗಳಲ್ಲಿಯೂ ಇಂತಹ ಉದಾಹರಣೆಗಳು ಅನೇಕ.

ಈಗೀಗ ವೈದ್ಯರು ತುಂಬಾ ಬ್ಯುಸಿ . ಅವರ ಸೇವೆಗೆ ದಿನದ 24 ತಾಸುಗಳೂ ಕಡಿಮೆಯಾಗುತ್ತಿವೆ! ಬೆಳಗಾದರೆ ಒಂದು ನರ್ಸಿಂಗ್ ಹೋಂ, ಮಧ್ಯಾಹ್ನಕೆ ಮತ್ತೊಂದು, ಇದ್ದರೆ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲವು ತಾಸುಗಳು, ಮತ್ತೆ ಮದ್ಯಾಹ್ನ-ಸಂಜೆ ಉಳಿದ ಆಸ್ಪತ್ರೆಗಳಿಗೆ. ಹೀಗೆ, ಹಣ ಗಳಿಕೆಯ ದಾಹದಲ್ಲಿ ಅಲ್ಲಿಂದ ಇಲ್ಲಿಂದ ಅಲೆದಾಡುವ ವೈದ್ಯರ ಸಮೂಹ ಹೆಚ್ಚುತ್ತಿದೆ. ಚಿಕಿತ್ಸೆಗೆ ವ್ಯವಧಾನವಿಲ್ಲವಾಗಿದೆ.

ವೈದ್ಯಕೀಯ ರಂಗದಲ್ಲಿ ಸೇವೆ ಎಂದರೆ ಹಣ ಸುಲಿಯುವ ಗುಡಾಣ. ಇನ್ನೊಂದೆಡೆ ವೈದ್ಯರ ಪರಿಣಿತಿ, ವೃತ್ತಿ ಕೌಶಲ್ಯವೂ ತೀರಾ ಕೆಳ ದರ್ಜೆಯದು. ಹೀಗಾಗಿ ಬೇಕಾಬಿಟ್ಟಿ ಚಿಕಿತ್ಸೆ. ಅವರಿಗೆ ರೋಗಿಗಳ ಬಗ್ಗೆ ಕಾಳಜಿಯಿಲ್ಲ. ಇದು ಆರಂಭಗೊಳ್ಳುವುದೇ ವೈದ್ಯಕೀಯ ಶಿಕ್ಷಣದಿಂದ. ಲಕ್ಷಾಂತರ ರೂಪಾಯಿಗಳಿಗೆ ಸೀಟು ಗಳಿಸುತ್ತಿರುವುದರಿಂದ, ಡಿಗ್ರಿ ಸಂಪಾದಿಸುವವರೆಗೂ ಹಣವನ್ನು ಸುರಿಯಬೇಕು. ಹಣ ನೀಡಿದರೆ ಸಾಕು ಪರೀಕ್ಷೆಯಲ್ಲಿ ಉತ್ತರಿಸದಿದ್ದರೂ ಪಾಸಾದ ಸರ್ಟಿಫಿಕೇಟ್ ಸಹ ಸಿಗಬಲ್ಲದು. ಇಂತಹ ಕಳಪೆ ಶಿಕ್ಷಣ, ಪ್ರತಿಭಾಹೀನತೆಯ ವೈದ್ಯರಿಂದ ದೊರಕುವ ಶುಶ್ರೂಷೆಯಾದರೂ ಎಂತಹುದು. ಹೀಗಾಗಿ ವೈದ್ಯಕೀಯ ವೃತ್ತಿ ಹಣ ಸುರಿಯುವ ದಂಧೆಯಾಗಿಯೇ ಹೊರತು ಸಮರ್ಥ ಸೇವೆಯಾಗಿಲ್ಲ.

ಎಸ್.ವೈ.ಗುರುಶಾಂತ್

ಜೊತೆಗೆ ಸರಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ಯಂತ್ರ-ತಂತ್ರಜ್ಞಾನವಿದ್ದರೂ ಹಣ ಬಿಡುಗಡೆಯಾದರೂ ಅವುಗಳು ಕೆಟ್ಟುಹೋದ ಗುಜರಿ ಸಾಮಾನುಗಳು. ಸರ್ಕಾರಿ ಆಸ್ಪತ್ರೆಗೆ ಬರುವ ಹೆಚ್ಚಿನವರು ಬಡವರೇ ಆಗಿದ್ದಾರೆ. ಪ್ರತಿಯೊಂದು ಎಕ್ಸ್‌ರೇ, ರಕ್ತ ಮುಂತಾದ ಪರೀಕ್ಷೆಗಳಿಗೆ ಖಾಸಗಿ ಸಂಸ್ಥೆಗಳ ಬಳಿಗೆ ಹೋಗಬೇಕು. ಔಷಧಿಗಳೂ ಆಸ್ಪತ್ರೆಯಿಂದ ಮಂಗಮಾಯ. ವ್ಯಾಪಕ ಭ್ರಷ್ಟಾಚಾರ ಎಲ್ಲೆಲ್ಲೂ. ಇದೊಂದು ಧಾರುಣ ಸ್ಥಿತಿ. ಸರ್ಕಾರಕ್ಕೆ ಇಧು ತಿಳಿಯದೆಂದೇನೂ ಅಲ್ಲ. ಇದರಲ್ಲಿ ಹಲವರಿಗೆ ಪಾಲು....



ಅವನು ಪಾಸಾಗಿಬಿಟ್ಟ. ಈಗ ಅವನಿಗೆ ಮೆಡಿಕಲ್ ಅಥವಾ ಇಂಜಿನಿಯರಿಂಗ್ ಸೀಟು ಕೊಡಿಸುವ ಪರೀಕ್ಷೆಯಲ್ಲಿ ನೀವು ಪಾಸಾಗಬೇಕು !

ಈ ಸ್ಥಿತಿಗೆ ಕಡಿವಾಣ ಹಾಕಬೇಕು. ಜನಸಾಮಾನ್ಯರ ಹಿತ ಕಾಪಾಡಲು ಸರ್ಕಾರ ತೀವ್ರ ಗಮನ ವಹಿಸಬೇಕು. ದೂರುಗಳು ಬಂದಾಗ ತಕ್ಷಣ ಕಾರ್ಯವೆಸಗಬೇಕು. ಶಿಕ್ಷಿಸಬೇಕು. ಆಡಳಿತವನ್ನು ಶಿಸ್ತುಬದ್ಧಗೊಳಿಸಬೇಕು. ಇದಕ್ಕಾಗಿಯೇ ಒಂದು ದೊಡ್ಡ ಇಲಾಖೆ, ವೈದ್ಯಕೀಯ ಶಿಕ್ಷಣಕ್ಕೆ ಒಂದು ವಿಶ್ವವಿದ್ಯಾಲಯ ಇದ್ದರೂ, ಅವು ಪ್ರೇಕ್ಷಕ, ಪೋಷಕರಾದರೆ ಅವುಗಳ ಅಸ್ತಿತ್ವಕ್ಕೆ ಅರ್ಥವೇನಿದೆ?

ಮಾರಾಟಕ್ಕಿರುವ ಶಿಕ್ಷಣ

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಪಡೆಯುವುದೇ ಅತ್ಯಂತ ದುಸ್ತರವಾಗಿರುವ ಈ ದಿನಗಳಲ್ಲಿ ಉನ್ನತ ಶಿಕ್ಷಣದ ವ್ಯಾಪರೀಕರಣವು ಜನಸಾಮಾನ್ಯರ ಪಾಲಿಗೆ ನಿಲುಕದ ನಕ್ಷತ್ರ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳು ಮಾಡುತ್ತಿರುವ ಉದಾರೀಕರಣದ ನೀತಿಗಳು ಶಿಕ್ಷಣವನ್ನು ಹಣವಿದ್ದವರಿಗೆ ಮಾತ್ರ ಖರೀದಿಸುವ ಸರಕನ್ನಾಗಿಸಿದೆ. ಯು.ಜಿ.ಸಿ.ಯು. ಪದೇ ಪದೇ ಸಾರುವ ಸ್ವಂತ ಖರ್ಚಿನಲ್ಲೇ ಶಿಕ್ಷಣದ ನೀತಿಯ ಅನುಷ್ಠಾನದ ಫಲವಿದು. ಈಗಾಗಲೇ ಹಲವು ಖಾಸಗೀ ಕಾಲೇಜುಗಳಿಗೆ ಸ್ವಾಯತ್ತತೆ ನೀಡಿ ಅವುಗಳೇ ಸ್ವಯಂ ವಿಶ್ವವಿದ್ಯಾಲಯಗಳಾಗಿ ಕಾರ್ಯನಿರ್ವಹಿಸುತ್ತಿವೆ. ಮನಬಂದಂತೆ ಹಣ ದೋಚುತ್ತಿವೆ. ಈ ಧೋರಣೆಗಳ ಜಾಡು ಗಮನಿಸಿದರೆ ಮುಂದೆ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳು ಮತ್ತು ವಿಶ್ವವಿದ್ಯಾಲಯೇತರ ಖಾಸಗೀ ಸಂಸ್ಥೆಗಳು ಸೀಟುಗಳ ವ್ಯಾಪಾರ ಆರಂಭಿಸಲಿವೆ. ಈಗಾಗಲೇ ಕರ್ನಾಟಕ ರಾಜ್ಯ ಸರ್ಕಾರವು ಖಾಸಗೀ ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಶಾಲೆಗಳನ್ನು ದತ್ತು ತೆಗೆದುಕೊಳ್ಳಲು ಆಮಂತ್ರಿಸಿ ತನ್ನ ಸಂವಿಧಾನಬದ್ಧ ಹೊಣೆಯಿಂದ ಕೈತೊಳೆಯಬೇಕೆಂದು ಮುಂದಾಗಿದೆ. ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣದ ದುಷ್ಟ ಪ್ರವೃತ್ತಿಗಳ ವಿರುದ್ಧ ಪ್ರತಿರೋಧ ಒಡ್ಡಬೇಕಿದೆ.

ಕಾಡಿನಿಂದ ನಾಡಿಗೆ ನುಗ್ಗುತ್ತಿರುವ ಪ್ರಾಣಿಗಳು

ಕಾಡಿನ ಪ್ರಾಣಿಗಳು ಹಾಲಿ ಊರೊಳಗೆ ನುಗ್ಗತೊಡಗಿವೆ. ಇತ್ತೀಚೆಗೆ ರಾಯಚೂರು ಪಕ್ಕದ ಹಳ್ಳಿಯೊಂದಕ್ಕೆ ಧಾಳಿಯಿಕ್ಕಿದ ತೋಳಗಳ ಹಿಂಡು, ಜನರನ್ನು ಕಡಿದು ಗಾಯಗೊಳಿಸಿವೆ. ಸೂಕ್ತ ವೈದ್ಯಕೀಯ ಶುಶ್ರೂಷೆಯಿಲ್ಲದೇ ಹದಿಮೂರು ಜನ ಸಾವನ್ನಪ್ಪಿದ್ದಾರೆ. ಹಸಿರು ಕಾನನದ ಕೊಡಗು ಜಿಲ್ಲೆಯಲ್ಲಿ ಆನೆಗಳು ತೋಟಗಳಲ್ಲಿ ದಾಂಧಲೆ ಎಬ್ಬಿಸಿ, ಅಪಾರ ಬೆಳೆ ನಾಶ ಮಾಡಿದ್ದಲ್ಲದೇ ಹಲವಾರು ಕೂಲಿಕಾರರು ಕಾವಲುಗಾರರನ್ನು ತುಳಿದುಕೊಂದಿದೆ. 1993 ರಿಂದ ಇಲ್ಲಿನ ಆನೆ ತುಳಿತಕ್ಕೆ ಒಳಗಾಗಿ ಸಾವನ್ನಪ್ಪಿದವರು, ಮಾರಣಾಂತಿಕ ಗಾಯಗಳಾದವರು ಅನೇಕರು. ಬೆಳೆ ಹಾನಿಗೆ ಲೆಕ್ಕವಿಲ್ಲ. ಕನಕಪುರ, ಬನ್ನೇರುಘಟ್ಟ ಪ್ರದೇಶದಲ್ಲಿ ಇದೇ ಕಥೆ. ನಮ್ಮ ಸಂಡೂರು ತಾಲೂಕಿನ ತಾರಾ ನಗರ ಗ್ರಾಮಕೆ ಬಂದ ಚಿರತೆಯೊಂದು ಹೊರಗೆ ಮಲಗಿದ್ದ ಬಾಲಕನನ್ನು ಎಳೆದೊಯ್ದು ಕಚ್ಚಿ ಕೊಂದು ತುಂಡು ತುಂಡು ಮಾಡಿದೆ. ಅಲ್ಲಿ ಇದು ಎರಡನೇ ಪ್ರಕರಣ. ಅದೇ ಸಾಲಿನ ಬೆಟ್ಟದಂಚಿನಲ್ಲಿರುವ ಉಬ್ಬಲಗಂಡಿ ಹಳ್ಳಿಗೆ ಈ ಚಿರತೆಗಳು ಅದೆಷ್ಟೋ ಬಾರಿ ದಾಳಿಯಿಕ್ಕಿ ದನಕರುಗಳನ್ನು ಕೊಂದುಹಾಕಿವೆ. ಕರಡಿಗಳ ಹಾವಳಿಗೂ ಮಿತಿಯಿಲ್ಲ. ಇತ್ತೀಚೆಗೆ ಕೋತಿಗಳೂ ನಗರಗಳಿಗೆ ನುಗ್ಗಿ ದಾಂಧಲೆ ಎಬ್ಬಿಸುತ್ತಿವೆ. ಇವು ಒಂದೆರಡಲ್ಲ. ಇಂತಹದ್ದು ಘಟಿಸಿದ ಮೇಲೆ ಅರಣ್ಯ ಇಲಾಖೆ, ಸರ್ಕಾರದ ಸಿಬ್ಬಂದಿ ಔಪಚಾರಿಕ ಭೇಟಿ, ಪರಿಹಾರದ ಭರವಸೆ ನೀಡಿದ ನಂತರ ಏನೂ ಇಲ್ಲದೇ ಹೋಗುತ್ತದೆ.

ಇಲ್ಲಿ ಮುಖ್ಯ ಪ್ರಶ್ನೆಯೆಂದರೆ ಕಾಡಿನಲ್ಲಿದ್ದ ಈ ಪ್ರಾಣಿಗಳು ನಾಡಿಗೇಕೆ ಬರುತ್ತವೆ. ಮುಖ್ಯವಾಗಿ ಅವುಗಳ ವಾಸಸ್ಥಾನ ಆಹಾರ ಸ್ಥಾನವಾಗಿದ್ದ ಕಾಡುಗಳು ಎಣೆಯಿಲ್ಲದೇ ನಾಶವಾಗುತ್ತಿದೆ. ಕಾಡುಗಳ್ಳತನ ಹೆಚ್ಚುತ್ತಿದೆ. ಬಯಲಾಗುತ್ತಿವೆ. ಗಣಿಗಾರಿಕೆಯೂ ಹೆಚ್ಚುತ್ತಿದೆ. ಹೀಗಾಗಿ ಕಾಡು ಇಲ್ಲದೆ, ಮಳೆಯೂ ಬಾರದೆ ವನ್ಯ ಜೀವಿಗಳ ವಾಸಕ್ಕೆ ಸಂಚಕಾರ ಬಂದಿದೆ. ವಾಸಿಸಲು ಅಸಾಧ್ಯವಾಗುವ, ತನ್ನ ಆಹಾರವೇ ಇಲ್ಲವಾದಾಗ ಅವುಗಳ ಸಹಜವಾಗಿ ಊರುಗಳ ಕಡೆ ಮುಖ ಮಾಡುತ್ತವೆ. ಕೆಲವೊಮ್ಮೆ ಅವುಗಳು ಬಲಿಯಾಗುತ್ತವೆ. ಪರಿಸರದ ಈ ಅಸಮತೋಲನ ಹಲವಾರು ದುರಂತಗಳಿಗೆ ಕಾರಣವಾಗಿದೆ. ಮತ್ತು ದುರಂತಗಳ ಸರಮಾಲೆ ಹೆಚ್ಚಲಿದೆ. ಕಾಡು ಉಳಿಸುವ, ಬೆಳೆಸುವ, ಪರಿಸರದ ಸಮತೋಲನ ಕಾಪಾಡಿ ಪ್ರಾಣಿ ಪ್ರಪಂಚಕೆ ಅನುವು ಮಾಡುವುದೂ ಆಗಬೇಕು. ಈ ಭೂಮಿಯಲ್ಲಿ ವನ್ಯ ಪ್ರಾಣಿಗಳಿಗೂ ಅಷ್ಟೇ ವಾರಸುದಾರಿಕೆ ಇದೆ. ಇದರ ರಕ್ಷಣೆ ನಾಗರಿಕರ ಹಾಗೂ ಸರ್ಕಾರದ ಹೊಣೆ. ಆದರೆ ಅರಣ್ಯ ಬೆಳೆಸಲು ಮೀಸಲಾಗಿರಿಸಿರುವ ಹಣ ಸಾವಿರಾರು ಕೋಟಿಗಳಷ್ಟಾದರೂ ಅಲ್ಲಿ ಭ್ರಷ್ಟಾಚಾರವೇ ಅಧಿಕ. ಬೆಳೆಸುವ ಗಿಡಮರಗಳೂ ಸಹ ಪ್ರಾಣಿಗಳಿಗೆ ಆಹಾರ, ಹಣ್ಣು ದೊರಕಿಸದೇ ಬೇಕಾಬಿಟ್ಟಿ ಬೆಳೆಸುವಂತಹವು. ಈ ದಿಸೆಯಲ್ಲಿ ಸೂಕ್ತ ಗಮನ ಕಾಳಜಿ ಅಗತ್ಯ.

ತಿದ್ದುಪಡಿ

ಐಕ್ಯರಂಗದ ಜುಲೈ 30, 2000 ರ ಸಂಚಿಕೆ 31 ರ ಸಂಚಿಕೆಯ ಬಾಂಬ್ ಸ್ಫೋಟ ಯಾರ ಕೈವಾಡ ಲೇಖನದ ಮೊದಲ ಪ್ಯಾರಾದಲ್ಲಿ ಭಾರತ ಯಾತ್ರಾ ಕೇಂದ್ರ ಎಂದು ಪ್ರಕಟವಾಗಿದೆ. ಅದು ತಪ್ಪಾಗಿದ್ದು ಭಾರತ ಏಕತಾ ಆಂದೋಲನ ಎಂದಿರಬೇಕಿತ್ತು. ದೀನದಾರ್ ಅಂಜುಮಾನ್ ಸಂಸ್ಥೆಯೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲವೆಂದು ಭಾರತ ಯಾತ್ರಾ ಕೇಂದ್ರದ ಪ್ರಮುಖರಾದ ಬಿ.ಎಲ್.ಶಂಕರ್, ನಾಗರಾಜಮೂರ್ತಿಯವರು ಸ್ಪಷ್ಟಪಡಿಸಿದ್ದಾರೆ. ಕಣ್ತಪ್ಪಿನಿಂದಾದ ದೋಷಕ್ಕೆ ವಿಷಾದಿಸುತ್ತೇವೆ.

- ಸಂಪಾದಕರು

ಶುಭಾಶಯಗಳು



ಡಿವೈಎಫ್‌ಐ ಗುಲ್ಬರ್ಗ ಜಿಲ್ಲಾ ಅಧ್ಯಕ್ಷರಾದ ಶ್ರೀಮಂತ ಬಿರಾದಾರ ಮತ್ತು ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷೆಯಾದ ಶಾಂತಾಘಂಟಿಯವರು ವಿವಾಹವಾದ ಸಂತೋಷದ ಸಂದರ್ಭದಲ್ಲಿ 'ಐಕ್ಯರಂಗ'ಕ್ಕೆ ರೂ. 200/- ಕೊಡುಗೆ ನೀಡಿದ್ದಾರೆ. ಅವರಿಗೆ ತುಂಬುಹೃದಯದ ಶುಭಾಶಯಗಳು

ಡಾ।। ರಾಜ್ ಅಪಹರಣದ ಹಿಂದೆ-ಮುಂದೆ



ಇನ್ನೇನು..... ವೀರಪ್ಪನ್ ಬಂಧನದಿಂದ ಡಾ।। ರಾಜ್ ಕುಮಾರ್ ಹಾಗೂ ಸಂಗಡಿಗರು ಬಿಡುಗಡೆಯಾಗಿ ಬಿಡುತ್ತಾರೆ ಎಂದು ಉಸಿರು ಹಿಡಿದು ಕಾಯುತ್ತಿದ್ದ ಎಲ್ಲರೂ ನಿರಾಶರಾಗಿ ವಾಪಾಸಾಗಿದ್ದಾರೆ. ಅವರನ್ನು ಕರೆತರುವ ತಮಿಳುನಾಡಿನ ಪುಣಜನೂರಿಗೆ ತೆರಳಿದ್ದ ವಾಹನಗಳು, ಟಿವಿ, ಪತ್ರಿಕೆಗಳವರು ಬಂದ ದಾರಿಯಲ್ಲಿ ಹಿಂತಿರುಗಿದ್ದಾರೆ. ಈಗ ಮತ್ತೇ ಅಲ್ಲೀಗ ಮೌನ. ಸರ್ಕಾರ ಹಾಗೂ ನಾಡಿನ ಜನತೆಯಲ್ಲಿ ಆತಂಕ,, ತಳಮಳ ಕಳವಳ... 15 ದಿನಗಳ ಶಾಲೆ-ಕಾಲೇಜ್ ಬಂದ್ ಸರ್ಕಾರದ ಯಂತ್ರ ಜನರ ಪಾಲಿಗೆ ಸ್ಥಗಿತವಾಗಿರುವಂತಹ ಸ್ಥಿತಿ.

ಕಾಡುಗಳ್ಳ, ನರಹಂತಕ, ಕ್ರೂರಿ ವೀರಪ್ಪನ್ ತಂಡ ಕನ್ನಡದ ಮೇರು ನಟ ಡಾ।। ರಾಜ್‌ರವರನ್ನು ಜುಲೈ 30 ರಂದು ಅಪಹರಿಸಿ ಎರಡು ವಾರಗಳು ಸಂದಿವೆ. ಒತ್ತೆಯಾಳುಗಳ ಬಿಡುಗಡೆಯಾಗಬೇಕಾದರೆ ತನ್ನ ಹತ್ತು ಬೇಡಿಕೆಗಳನ್ನು ಈಡೇರಿಸಬೇಕೆಂದು ಕಳುಹಿಸಿದ ಕ್ಯಾಸೆಟ್‌ನ ಸಂದೇಶದಂತೆ ಕರ್ನಾಟಕ ತಮಿಳುನಾಡು ಸರ್ಕಾರಗಳು ಅವುಗಳನ್ನು ಈಡೇರಿಸುವುದಾಗಿ ಪ್ರತಿಕ್ರಿಯೆ ನೀಡಿದವು.

ಇದನ್ನು ಅನುಸರಿಸಿ ಒತ್ತೆಯಾಳುಗಳೆಲ್ಲಾ ಬಿಡುಗಡೆಯಾಗಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಅದರ ಬದಲು ಬಂದದ್ದು ನಕಾರಾತ್ಮಕ ಉತ್ತರ. ಇದೀಗ ವೀರಪ್ಪನ್ ಹಾಗೂ ಡಾ।। ರಾಜ್, ಸಹ ಚರರನ್ನು ಕಂಡು ವಾಪಸಾಗಿರುವ ಉಭಯ ಸರ್ಕಾರಗಳ ಪ್ರತಿನಿಧಿ ಸಂಧಾನಕಾರ ನಕ್ಕೀರನ್ ಗೋಪಾಲನ್ ಮತ್ತೊಂದು ಕ್ಯಾಸೆಟ್ ಹಾಗೂ ಲಿಖಿತ ಬೇಡಿಕೆಗಳ ಹೊರೆಯನ್ನು ತಂದಿದ್ದಾನೆ. ಅವುಗಳ ಈಡೇರಿಕೆಗೆ ಈ ತಿಂಗಳ 19ನೇ ತಾರೀಖಿನ ಗಡುವು ಬೇರೆ ವಿಧಿಸಲಾಗಿದೆ. ಈ ಬೇಡಿಕೆಗಳ ಬಗೆಗೂ ಚರ್ಚಿಸಿರುವ ಸರ್ಕಾರ ವಿವರವಾದ ಉತ್ತರ ಸಿದ್ಧಪಡಿಸಿ ಮತ್ತೇ ಗೋಪಾಲನ್‌ನನ್ನೂ ಅಪಹರಣಕಾರ ವೀರಪ್ಪನ್ ಬಳಿಗೆ ಕಳುಹಿಸಲು ನಿರ್ಧರಿಸಿದೆ. ಕಾವೇರಿ ವಿವಾದ ಅಂತರಾಷ್ಟ್ರೀಯ ನ್ಯಾಯಾಲಯಕ್ಕೆ ಒಪ್ಪಿಸುವ ತಮಿಳುಭಾಷೆ ಎರಡನೇ ಸ್ಥಾನಕ್ಕೆ ಏರಿಸುವುದನ್ನು ಸಕಾರಣವಾಗಿ ತಿರಸ್ಕರಿಸಲಾಗಿದೆ.

ಡಾ।। ರಾಜ್ ರವರ ಅಪಹರಣ ಮತ್ತು ವೀರಪ್ಪನ್ ಮಂಡಿಸಿರುವ ಬೇಡಿಕೆಗಳು ಹಿಂದಿನಂತಿಲ್ಲ. ಹಾಗೂ ಹಿಂದಿನಂತಲ್ಲ. ಕರ್ನಾಟಕದ ಅಪಾರ ಜನರ ಪ್ರೀತಿಗೆ ಪಾತ್ರವಾಗಿರುವ ಡಾ।। ರಾಜ್‌ರವರನ್ನು ಅಪಹರಿಸುವ ಮೂಲಕ ವೀರಪ್ಪನ್ ಹೆಚ್ಚಿನ ಶಕ್ತಿಯನ್ನು ಗಳಿಸಿದ್ದಾನೆ. ಈ ಹಿಂದೆಲ್ಲಾ ಹಾಸ್ಯಾಸ್ಪದ ಬೇಡಿಕೆಗಳನ್ನು ಬಹಿರಂಗವಾಗಿ ಮಂಡಿಸುತ್ತಿದ್ದ ವೀರಪ್ಪನ್, ಈ ಬಾರಿ ಕೇಳಿರುವ ಹತ್ತು ಮತ್ತೊಂದಷ್ಟು ಬೇಡಿಕೆಗಳು ಭಿನ್ನವಾಗಿವೆ. ಕಾವೇರಿ ನೀರಿನ ಹಂಚಿಕೆ, ತಮಿಳು ಭಾಷೆ ಸ್ಥಾನಮಾನ ಕಂಬಾಲಪಲ್ಲಿ ಘಟನೆ, ಹೀಗೆ ತನಗಾಗಿ ಕೇಳಿದ್ದು ತೀರಾ ಕಮ್ಮಿ. ಎಲ್ಲರೂ ನಿರೀಕ್ಷಿಸುತ್ತಿದ್ದ ಕ್ಷಮಾಪಣೆ ಬೇಡಿಕೆ ಇಲ್ಲಿಯವರೆಗೂ ಕಣ್ಮರೆಯಾಗಿದೆ. ಟಾಡಾಕಾಯಿದೆ ಅಡಿಯಲ್ಲಿ ಬಂಧಿತರಾಗಿರುವ ತನ್ನ ಕೆಲವು ಸಹಚರರ ಬಿಡುಗಡೆ ಪೋಲೀಸ್ ಕಾರ್ಯಚರಣೆಯಲ್ಲಿ ಸಂತ್ರಸ್ತರ ಬೇಡಿಕೆಗಳನ್ನು ಬಿಟ್ಟರೆ ಉಳಿದವು ಬಹುತೇಕ ರಾಜಕೀಯ ಸ್ವರೂಪದ್ದಾಗಿದೆ. ಹೀಗಾಗಿ ಸಹಜವಾಗಿ ಈ ಬೇಡಿಕೆಗಳು ವೀರಪ್ಪನ್‌ನದು ಮಾತ್ರವಾಗಿರದೇ ತಮಿಳು ನಾಡಿನ ಕೆಲವು ಉಗ್ರಗಾಮಿ ಸಂಘಟನೆಗಳ ಹಸ್ತಕ್ಷೇಪ ಸ್ಪಷ್ಟವಿದೆ. ತಮಿಳುನಾಡು ಲಿಬರೇಷನ್ ಆರ್ಮಿ ಎಂಬ ಎರಡು ಸಂಘಟನೆಗಳು ವೀರಪ್ಪನ್ ಜೊತೆ ಇವೆ ಎಂದೂ ಇವುಗಳಿಗೆ ಕುಖ್ಯಾತ ಎಲ್‌ಟಿಟಿಇ ಯೊಂದಿಗೆ ಸಂಬಂಧವಿರುವುದಾಗಿ ವರದಿಯಾಗಿರುವುದು ಗಂಭೀರ ಬೆಳವಣಿಗೆ. ಈ ಹಿಂದೆ ನಡೆದ ನಿರಂತರ ಪೋಲೀಸ್ ಕಾರ್ಯಚರಣೆಯಿಂದ ವೀರಪ್ಪನ್‌ನ ಪಡೆ 146 ರಿಂದ 4 ಅಥವಾ 5 ಜನರಿಗೆ ಇಳಿದಿದ್ದು ಈ ಹಂತದಲ್ಲಿ ಆ ಉಗ್ರಗಾಮಿ ಸಂಘಟನೆಗಳ ನೆರವನ್ನು ಆತ ಪಡೆಯುತ್ತಿದ್ದಾನೆ ಮತ್ತೆ ಅವರ ಒಂದು ಭಾಗವಾಗುತ್ತಿದ್ದಾನೆ ಎಂದು ಸುದ್ದಿಗಳಿವೆ. ಆ ಗುಂಪುಗಳೂ ಸಹ ದುರ್ಬಲವಾಗಿದ್ದು ಮತ್ತೇ ಚಿಗುರಲು ದಂತ ಚೋರನ ನೆರವು ಅಪೇಕ್ಷಿಸಿವೆ. ಮೊದಲು ಕಳುಹಿಸಿದ ಕ್ಯಾಸೆಟ್‌ನಲ್ಲಿ ವೀರಪ್ಪನ್ ದನಿಯಲ್ಲದೇ, ಆಗುಂಪಿನ ನಾಯಕ ಮಾರನ್‌ನದೂ ಇದೆಯಂತೆ. ಕಾಡುಗಳ್ಳ, ಗೋರಪಾತಕನಾಗಿರುವ ವೀರಪ್ಪನ್ ತಮಿಳುನಾಡಿನ ರಾಜ್ಯ ಜನ ಹಾಗೂ ಭಾಷೆಗಳ ರಕ್ಷಕ ಎಂಬ ಹೊಸ ಕವಚ ತೊಡಲು ರಾಜಕೀಯ ಹೆಗಲಿಗೆ ಗುರುತಿಸಿಕೊಳ್ಳುವ ಹವಣಿಸುತ್ತಿದ್ದಾನೆ. ವೀರಪ್ಪನ್ ಹಾಗೂ ಉಗ್ರಗಾಮಿ ಸಂಘಟನೆಗಳಿಗೆ ಸಹಾನುಭೂತಿ ಹೊಂದಿರುವವರು ಇದರ ರಾಜಕೀಯ ಲಾಭ ಪಡೆಯಲು ಹೊಂಚು ಹಾಕಿದಂತಿದೆ. ಕೆಲವರಂತೂ ತಮಿಳುನಾಡು ಹಾಗೂ ಕರ್ನಾಟಕ ಜನತೆಯನ್ನು ಪ್ರಚೋದಿಸುವಂತೆ ಮಾತನಾಡತೊಡಗಿದ್ದಾರೆ. ಕಾವೇರಿನದಿ ನೀರು, ತಿರುವಳ್ಳುವರ್ ಪ್ರತಿಮೆಯಂತಹ ವಿಷಯಗಳಲ್ಲಿ ರಾಜ್ ಅಪಹರಣ ತಳುಕು ಹಾಕುವುದು ಅಪಾಯಕಾರಿಯಾಗಿದೆ.

ಈ ಅಪಹರಣ ವಿದ್ಯಮಾನಗಳ ಬಗ್ಗೆ ಎರಡು ಸರ್ಕಾರಗಳೂ ಹಲವು ಯತ್ನ ನಡೆಸಿವೆ.

ರಾಜ್ ಹಾಗೂ ಸಂಗಡಿಗರನ್ನು ಬಿಡುಗಡೆಮಾಡಲು ಯತ್ನಿಸುತ್ತಿದೆ. ಸರ್ವ ಪಕ್ಷಗಳ ಸಭೆಯಲ್ಲಿಯೂ ಸಮಾಲೋಚನೆ ನಡೆದಿದೆ. ಒಟ್ಟಾರೆ ಎಲ್ಲರ ಗಮನ ಅಪಹರಣಕ್ಕೊಳಗಾದವರನ್ನು ಬಿಡುಗಡೆ ಮಾಡುವುದರತ್ತ ಆದ್ಯತೆ. ಹೀಗಾಗಿ ಇದು ಸೂಕ್ಷ್ಮ ವಿಚಾರವೂ ಹೌದು. ಆದರೆ ರಾಜ್ಯ ಸರ್ಕಾರದ ಹಾಗೂ ಸಾರ್ವಭೌಮ ಜನತೆಯ ಗೌರವ ಮತ್ತು ರಕ್ಷಣಾ ಪಡೆಗಳ ಆತ್ಮಸ್ಥೈರ್ಯ ಕುಂದಾಗದಂತೆ ಸಹ ವ್ಯವಹರಿಸಬೇಕಿದೆ. ಇಂತಹ ಅಪಹರಣಗಳ ಮೂಲಕ ನಾಗರೀಕ, ಸಾರ್ವಭೌಮ ಸರ್ಕಾರಗಳನ್ನು ಮಣಿಸುವ ಪ್ರವೃತ್ತಿಯನ್ನು ಮಟ್ಟ ಹಾಕಲೇ ಬೇಕು.

ರಾಜ್ ಅವರ ಅಪಹರಣದಿಂದ ತಲ್ಲಣಿಸಿದ ರಾಜ್ಯದ ಜನತೆ ಬೀದಿಗಿಳಿದು ಪ್ರತಿಭಟನೆ, ನಡೆಸಿದೆ. ಕೆಲವೆಡೆ ಇದು ಹಿಂಸಾತ್ಮಕ ಸ್ವರೂಪ ತಳೆದಿವೆ ಕೆಲವು ಸಂಕುಚಿತವಾದಿಗಳು ಈ ಪ್ರಶ್ನೆಯನ್ನು ಭಾಷಿಕರ ಸಮಸ್ಯೆ ಎಂದು ಬಿಂಬಿಸಿ ಅವರಿಗೆ ಪಾಠ ಕಲಿಸಲು ಮುಂದಾಗಿ ಕೆಲವು ಅನ್ಯ ಭಾಷಿಕ ಜನರ ಮೇಲೆ ಆಕ್ರಮಣ ನೆಡೆಸಿದ್ದಾರೆ ಇದು ಖಂಡನೀಯ, ಅಪಹರಣ ಪ್ರಶ್ನೆಗಳಿಗೂ ದುಡಿದುಣ್ಣುವ ಈ ಜನತೆಗೂ ಎಲ್ಲಿಯಾ ಸಂಬಂಧ? ಆ ವಿಭಾಗದ ಎಲ್ಲರೂ ಸಹ ಅಪಹರಣ ಪ್ರತಿಭಟಿಸಿದ್ದಾರೆ. ಕೆಲವು ಕಾರ್ಮಿಕರು ಆತಂಕದಿಂದ ಬೇರೆಕಡೆ ಹೋಗಿದ್ದಾರೆ ಕಟ್ಟಡ ಕೆಲಸಗಾರರು ಬೆಂಗಳೂರು ನಗರ ಬಿಟ್ಟು ಉರಿಗೆ ತೆರಳಿದ್ದಾರೆ. ಕನ್ನಡ ತಮಿಳು ಎಂದು ಭಾಷೆಯ ನೆಲೆಗಟ್ಟಿನಲ್ಲಿ ಈ ಸಮಸ್ಯೆಯಲ್ಲಿ ಅರ್ಥೈಸತೊಡಗಿದ್ದಾರೆ ನಿಜವಾದ ಕ್ರಿಮಿನಲ್‌ಗಳು ತಪ್ಪಿಸಿಕೊಂಡು ಅವರಿಗೆ ರಕ್ಷಣೆಯ ಕೋಟೆ ನಿರ್ಮಿಸಿದಂತಾಗುತ್ತದೆ. ಉಭಯ ರಾಜ್ಯಗಳಲ್ಲಿರುವ ಜನತೆಯ ಒಗ್ಗಟ್ಟು ಮುರಿಯುತ್ತದೆ. ಎಂಬ ಉತ್ತರ ಅಗತ್ಯ. ಆದ್ದರಿಂದ ರಾಜ್ ಬಿಡುಗಡೆ ನಂತರದಲ್ಲಿಯೂ ರಾಜ್ಯದ ಜನತೆ ಶಾಂತಿ ಸೌಹಾರ್ದತೆ ಕಾಪಾಡಿಕೊಂಡು ಬರುವುದು ಮಹತ್ವವಾಗಿದೆ. ಸರ್ಕಾರವೂ ನಿಗವಹಿಸಿ ಶಾಂತಿ ಕದಡುವ ಶಕ್ತಿಗಳ ಮೇಲೆ ಕಠಿಣ ಕ್ರಮ ವಹಿಸಬೇಕು.



ಇನ್ನುಕೆಲವರಂತೂ ಕನ್ನಡ ನಾಡಿನ ಜನ ವೀರರಾಗಿ ಕಾಡಿಗೆ ನುಗ್ಗಿ ವೀರಪ್ಪನ್‌ನಿಂದ ಅಣ್ಣಾವ್ರನ್ನು ಬಿಡಿಸಿಕೊಂಡು ಬರುವುದಾಗಿಯೂ, ಒಂದ್ನೆನೂರು ಜನ ಸತ್ತರೂ ಪರವಾಗಿಲ್ಲ ಎಂದು ಹೇಳತೊಡಗಿದ್ದಾರೆ. ಆತ್ಮ ಶಕ್ತಿಯಿಂದ ವೀರಪ್ಪನ್‌ನ್ನು ಮಣಿಸಬಹುದೆಂದು ಇನ್ನೂಕೆಲವರು ಭರವಸೆಯಿರಿಸಿದ್ದಾರೆ. ನಾಲ್ಕಾರು ದಿನಗಳು ಚಳುವಳಿ, ಬಂದ್ ನಂತರ ಖ್ಯಾತ ನಟರೂ ಸಂಘಸಂಸ್ಥೆಗಳೂ ಪ್ರತಿನಿಧಿಗಳು ಹೈಟೆಕ್ ಸರಕಾರ ಮಂತ್ರಿಗಳು ವಿವಿಧ ಕೋಮಿನವರೂ ಪ್ರಾರ್ಥನೆ, ಪೂಜೆ ಉರುಳು ಸೇವೆ ಶುರು ಮಾಡಿಕೊಂಡಿದ್ದಾರೆ. ನಿರಂತರ ಭಜನೆ ನಡೆದಿದೆ. ಟಿ.ವಿ. ಪತ್ರಿಕೆಗಳಂತಹ ಸುದ್ದಿ ಮಾಧ್ಯಮಗಳು ಒಟ್ಟು ವಿದ್ಯಾಮಾನಗಳನ್ನು ಅತೀ ವಿಜೃಂಭಿಸಿ ಪ್ರಸಾರ ಮಾಡತೊಡಗಿವೆ. ಇದು ಜನರಲ್ಲಿನ ಆತಂಕವನ್ನು ತೋರಿಸುತ್ತದೆಯಾದರೂ ವೀರಪ್ಪನ್ ನಂತಹ ಹಲವು ದಶಕಗಳ ಸಮಸ್ಯೆಯ ಆಳ ಘಟನೆಯ ಹಿನ್ನೆಲೆ ಮೂಲಗಳತ್ತ ಜನರು ಚಿಂತಿಸುವ ಅಂತಹ ಪರಿಸ್ಥಿತಿಗೆ ಕಾರಣರಾದ ಶಕ್ತಿಗಳು ಮತ್ತು ವ್ಯವಸ್ಥೆಯ ಬಗ್ಗೆ ಯಜ್ಞಾಯಾಗಗಳೂ ನಡೆದಿವೆ. ಒಟ್ಟಾರೆ ಪುರೋಹಿತ ಬಿಡುವಿಲ್ಲದ ಕೆಲಸ ನಿರೀಕ್ಷಿಸಲಾರದಷ್ಟು ದಕ್ಷಿಣೆ, ಆಕ್ರೋಶಿತರಾಗಿ ಅದನ್ನು ಬದಲಾಯಿಸುವ ವಾಸ್ತವ ಸ್ಥಿತಿ ಅರಿಯುವಂತಹ ಒಂದು ಸಂದರ್ಭದಿಂದ ಬೇರೆಡೆಗೆ ಸಾಗಹಾಕುತ್ತದೆ. ಈ ಮಂತ್ರಗಳಿಗೆ ಮಾವಿನ ಕಾಯಿ ಉದುರುವ ಹಾಗಿದ್ದರೆ ಇಷ್ಟೆಲ್ಲಾ ಕಾರ್ಯಾಚರಣೆ, ಸಂಧಾನಗಳು ಅಗತ್ಯವಿದ್ದವೇ?



ಇದಕ್ಕಿಂತಲೂ ಆಸ್ಫೋಟಕಾರಿ ಸಂಗತಿಯೆಂದರೆ ಪದೇ ಪದೇ ಸಿಬ್ಬಂದಿ ಹಾಗೂ ವಿ.ಐ.ಪಿ.ಗಳನ್ನು ಅಪಹರಿಸುವ, ಪೋಲೀಸ್ ಪಡೆಗಳ ಕೈಗೆ ಸಿಗದೇ ತಪ್ಪಿಸಿಕೊಳ್ಳುವ ವೀರಪ್ಪನ್‌ನ ಸಾಹಸಗಳನ್ನು ಮೆಚ್ಚುವ ಒಂದು ಪ್ರವೃತ್ತಿಯೂ ಅಲ್ಲಲ್ಲಿ ಜನರಲ್ಲಿ ತಲೆ ಎತ್ತುತ್ತಿರುವುದು. ದ್ವೇಷಿಸಬೇಕಾದ್ದನ್ನು ಪೂಜಿಸುವ ಪ್ರವೃತ್ತಿ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿಸುವ ವ್ಯಕ್ತಿ ಪೂಜೆಯಂತಹ ಪಾಳೇಗಾರಿ ಮೌಲ್ಯಗಳು ಜೀವಂತವಿರುವ ಹಾಗೂ ಅಪಾಯ ಮಟ್ಟಕ್ಕೆ ಬೆಳೆದಿರುವುದರ ಸೂಚನೆಯಾಗಿದೆ. ಇಂತಹ ಸ್ಥಿತಿಯಲ್ಲಿ ವೀರಪ್ಪನ್‌ನಂತವರು ಸುಲಭವಾಗಿ ರಕ್ಷಣೆ ಪಡೆಯಬಲ್ಲರು.

ಮತ್ತೆ ಮತ್ತೆ ಎಲ್ಲರೂ ಕೇಳುವ ಒಂದು ಪ್ರಶ್ನೆ ಇಷ್ಟೆಲ್ಲಾ ಸರ್ಕಾರದ ಆಡಳಿತ ಯಂತ್ರ, ಕೇಂದ್ರ-ರಾಜ್ಯ ಸರ್ಕಾರಗಳ ಪಡೆಗಳು, ತಂತ್ರಜ್ಞಾನವಿದ್ದಾಗ್ಯೂ ಯಾಕೆ ವೀರಪ್ಪನ್ ಹಾಗೂ ತಂಡವನ್ನು ಹಿಡಿದು ಮಟ್ಟ ಹಾಕಲು ಆಗುತ್ತಿಲ್ಲ ಎಂಬುದು. ಸರಕಾರದ ಕಾರ್ಯಾಚರಣೆ, ಅದರ ಯಶಸ್ವಿಯಾಗುತ್ತಿದ್ದರೂ ಒಂದು ಹಂತದಲ್ಲಿ ಸ್ಥಗಿತತೆ, ಹಲವು ಅನುಮಾನಗಳಿಗೆ ಎಡೆ ಮಾಡುತ್ತದೆ. ನಿಜ. ಆದರೆ ಇಡಿಯಾಗಿ ವೀರಪ್ಪನ್ ಈ ವ್ಯವಸ್ಥೆಯ ಭಾಗ. ಕಾಡಿನಲ್ಲಿರುವ ಅಮೋಘ ಗಂಧ, ಗಿಡಮರಗಳು, ಕಾಡು ಪ್ರಾಣಿಗಳ ಚರ್ಮ, ದಂತ, ಎಲುಬುಗಳನ್ನು ಕಳ್ಳ ಸಾಗಾಣಿಕೆ ಮೂಲಕ ಸುಲಭದಲ್ಲಿ ದೋಚಿ ಅಕ್ರಮವಾಗಿ ಶ್ರೀಮಂತರಾಗುವ ಉದ್ಯಮಿಗಳು, ವ್ಯಾಪಾರಸ್ಥರು, ಇದರೊಂದಿಗೆ ಕೆಲವು ರಾಜಕಾರಣಿ, ಅಧಿಕಾರಿಗಳು ಶಾಮೀಲುತನ ಗುಟ್ಟಿನ ವಿಷಯವೇನಲ್ಲ. ಇವರೆಲ್ಲರಿಗೂ ಕಾಡುಗಳ್ಳರು ಬೇಕು. ಇಂತಹವರನ್ನು ಪೋಷಿಸುವುದು ಈ ವ್ಯವಸ್ಥೆ. ಹೀಗಾಗಿ ವೀರಪ್ಪನ್‌ರಂಥವರು ಒಂದಲ್ಲ ಒಂದು ರೂಪದಲ್ಲಿ ಮರುಹುಟ್ಟು ಪಡೆಯುತ್ತಲೇ ಇರುತ್ತಾರೆ. ನಮ್ಮ ಕಾನೂನು, ಸಂವಿಧಾನ, ಪ್ರಜಾಪ್ರಭುತ್ವಕ್ಕೆ ಸವಾಲಾಗಿ ನಿಲ್ಲುತ್ತಿರುತ್ತಾರೆ. ಈ ಶಕ್ತಿಗಳು ಮೇಲುಗೈ ಪಡೆಯದಂತೆ ನೋಡಿಕೊಳ್ಳುವುದು ನಾಗರೀಕ ಸರಕಾರದ ಜವಾಬ್ದಾರಿ. ಜನರ ಕರ್ತವ್ಯ ಸಹ.

ಒಟ್ಟಾರೆ ಡಾ।। ರಾಜ್ ಅಪಹರಣದ ವಿದ್ಯಮಾನಗಳು ಇನ್ನೂ ಹಲವಾರು ಗಂಭೀರ ಪ್ರಶ್ನೆಗಳನ್ನು ಎತ್ತದೆ ಮೊದಲು ರಾಜ್ ಹಾಗೂ ಸಹಚರರು ಬೀಡುಗಡೆಯಾಗಬೇಕು ನಂತರ ಬಯಲುಗೊಳ್ಳಬೇಕಾದ ವಿಷಯಗಳು ಹಲವು. ಆದರೀಗ ರಾಜ್ ಮತ್ತು ಸಹಚರರು ಸುರಕ್ಷಿತವಾಗಿ ವಾಪಸಾಗಬೇಕಿದೆ. ನಾಡಿನಲ್ಲಿ ಶಾಂತಿ, ಸೌಹಾರ್ದತೆ ಕಾಪಾಡಿಕೊಳ್ಳಬೇಕಿದೆ.

ಡಾ।। ರಾಜ್ ಮನೆಗೆ ಸಿಪಿಐ(ಎಂ) ನಿಯೋಗ

ಡಾ।। ರಾಜ್‌ರವರ ಮನೆಗೆ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ನೇತೃತ್ವದಲ್ಲಿ ತೆರಳಿ ಕುಟುಂಬದವರಿಗೆ ಸಾಂತ್ವನ, ಧೈರ್ಯ ಹೇಳಿದ್ದಾರೆ. ನಾಡಿನ ಜನತೆ ಶಾಂತಿ, ಸಂಯಮ, ಸೌಹಾರ್ದತೆಯಿಂದ ಇರಬೇಕೆಂದು ವಿನಂತಿಸಿದ್ದಾರೆ. ವಿವಿಧ ಕ್ಷೇತ್ರಗಳ ಗಣ್ಯರು, ಅಭಿಮಾನಿಗಳು ಸಹ ರಾಜ್ ಮನೆಗೆ ಭೇಟಿ ನೀಡುತ್ತಿದ್ದಾರೆ.

ಹೋರಾಟದ ಹಾದಿ ಹಿಡಿದ ರೈತ ಕುಟುಂಬಗಳು

ಕೆ.ಮಹಾಂತೇಶ್

ದಾವಣಗೆರೆ: ಜಿಲ್ಲಾಡಳಿತದಿಂದ ರೈತರ ಬೆಳೆ ನಾಶ

ಆವರಗೆರೆ, ದಾವಣಗೆರೆಗೆ ಹೊಂದಿಕೊಂಡಿರುವ ಗ್ರಾಮ. ಕಳೆದ ಮೂರು ವರ್ಷಗಳ ಕೆಳಗೆ ನಗರಸಭೆ ವ್ಯಾಪ್ತಿಗೆ ಸೇರಿದೆ. ಈ ಊರಿಗೆ ಸೇರಿರುವ ಸುಮಾರು 187 ಎಕರೆ ಗೋಮಾಳ ಜಮೀನು, ಇಲ್ಲಿಂದ ಮೂರು ಕಿ.ಮಿ. ದೂರದದಲ್ಲಿದೆ. ಇವರಲ್ಲಿ ಸುಮಾರು 23 ಎಕರೆ ನೀರಾವರಿಗೆ ಯೋಗ್ಯವಿರುವ ಭೂಮಿಯನ್ನು ಈ ಗ್ರಾಮದ 23 ಬಡಕುಟುಂಬಗಳು ಕಳೆದ 30 ವರ್ಷಗಳಿಂದಲೂ ವ್ಯವಸಾಯ ಮಾಡುತ್ತಾ ಬಂದಿವೆ. ಇವರೆಲ್ಲರೂ ವಿವಿಧ ಜಾತಿಗಳಿಗೆ ಹಾಗೂ ಧರ್ಮಕ್ಕೆ ಸೇರಿದವರು. ಈ ಕುಟುಂಬಗಳಲ್ಲಿ ಬಹುಪಾಲು ಕಾರ್ಮಿಕರಾಗಿ ಜೀವನ ಸಾಗಿಸುತ್ತ ಬಂದವರು. ಆದ್ದರೆ ಇತ್ತೀಚೆಗೆ ಈ ಭಾಗದ ಎಲ್ಲಾ ಕಾರ್ಖಾನೆಗಳು ಮುಚ್ಚಿದ್ದರಿಂದ ತಾವುಗಳು ಈ ಹಿಂದಿನಿಂದಲೂ ಉಳುಮೆ ಮಾಡಿಕೊಂಡು ಬಂದಿದ್ದ - ಅರ್ಧ ಎಕರೆ, ಮುಕ್ಕಾಲು ಎಕರೆ ಜಮೀನೇ ಈಗ ಅವರ ಬದುಕಿನ ಜೀವನಾಡಿಯಾಗಿತ್ತು. ಭತ್ತದ ಸಸಿಗಳನ್ನು, ಗೊಬ್ಬರಗಳನ್ನು ಸಾಲ ಮಾಡಿ ತಂದು ಕಳೆದು 20 ದಿನಗಳ ಹಿಂದಷ್ಟೇ ಮನೆ ಮಂದಿಯೆಲ್ಲ ಸೇರಿ ನಾಟಿ ಮಾಡಿದ್ದರು.

ಜಿಲ್ಲಾಡಳಿತದಿಂದ ದೌರ್ಜನ್ಯದ ಪರಮಾವಧಿ: ಆಗಸ್ಟ್ 3 ರ ವೆಂಕಟೇಶ್ ಎನ್ನುವ ರೈತ ಓಡೋಡಿ ಬಂದು ನಮ್ಮ ಹೊಲಗಳನ್ನು ನಾಶ ಪಡಿಸಲು ಬುಲ್ಡೋಜರ್ ತಂದು ನಿಲ್ಲಿಸಿದ್ದಾರೆ ಎನ್ನುವ ವಿಷಯ ತಲುಪಿದ ಕೂಡಲೇ ಅಲ್ಲಿ ಉಳುಮೆ ಮಾಡುತ್ತಿದ್ದ ರೈತ ಕುಟುಂಬಗಳೆಲ್ಲಾ ಆತಂಕಕ್ಕೀಡಾದವು. ವಿಷಯ ಗೊತ್ತಾಗುತ್ತಿದ್ದಂತೆಯೇ ಅವಸರದಲ್ಲಿ ಎಲ್ಲರೂ ಅಲ್ಲಿಗೆ ಬರುವಂತೆ ಹೇಳಿ ಆ ಸ್ಥಳವನ್ನು ತಲುಪಿದೆ. ಭಯಾನಕ ವಾತಾವಣ! ಒಂದೇ ಕ್ಷಣ! ಮಾನವನ ಬದುಕನ್ನು ನಾಶಪಡಿಸಲು ಕಾತರದಿಂದ ಕಾಯುತ್ತಿರುವ ಸಿಡಿಮದ್ದಿನ ರೂಪದಲ್ಲಿ, ಜೆಸಿಬಿ ಯಂತ್ರಗಳು ಸಿದ್ಧವಾಗಿ ನಿಂತಿದ್ದವು. ಕೆಳಗಡೆಯಲ್ಲಿ 3-4 ಪೋಲೀಸ್ ವಾಹನಗಳು, 30-40 ಪೋಲೀಸರು. ಅವರ ಕೈಯಲ್ಲಿ ಬಂದೂಕುಗಳು, ಪುಟ್ಟಿಗಳು, ಲಾಠಿಗಳು ರೆಡಿಯಾಗಿದ್ದವು. ಹತ್ತಾರು ಜನ ಅಧಿಕಾರಿಗಳು ಬಹುಶಃ ತಹಶೀಲ್ದಾರ್ ಬರುವಿಕೆಗಾಗಿ ಕಾಯುತ್ತಿದ್ದರು. ಇಂತಹ ಭಯಾನಕ ವಾತಾವರಣವನ್ನು ದೂರದಿಂದಲೇ ಗಮನಿಸಿದ ಕೆಲವರಂತೂ ಮೌನವಾಗಿ ಹಿಂದೆ ಸರಿಯತೊಡಗಿದರು.

ಸ್ಥಳಕೆ ತಹಶೀಲ್ದಾರ ಆಗಮಿಸುತ್ತಿದ್ದಂತೇಯ ಜಿಲ್ಲಾ ಆಡಳಿತ ಚುರುಕಾಯಿತು. ಅವರು ಬರುತ್ತಿದ್ದಂತೆಯೇ ನಾನು ಮತ್ತು ಸ್ಥಳದಲ್ಲಿದ್ದ ಕೆಲವು ರೈತರು ಸೇರಿ ಈ ಕ್ರಮವನ್ನು ಆಕ್ಷೇಪಿಸಿ ಪ್ರತಿಭಟಿಸತೊಡಗಿದೆವು. ಮತ್ತು ಈಗ ತಾನೆ ನಾಟಿ ಮಾಡಿದ ಬೆಳೆಯನ್ನು ನಾಶಪಡಿಸಬಾರದೆಂದು ಮತ್ತು ಮೇಲಾಧಿಕಾರಿಗಳ ಜೊತೆ ಮಾತನಾಡುವವರೆಗೂ ಈ ಕಾರ್ಯಾಚರಣೆ ನಿಲ್ಲಿಸಬೇಕೆಂದು ಕೇಳಿಕೊಂಡೆವು. ಆದರೆ ನಮ್ಮ ಯಾವುದೇ ಅಹವಾಲನ್ನು ಕೇಳಲು ತಹಶೀಲ್ದಾರ್ ತಯಾರಿರಲಿಲ್ಲ. ಎಲ್ಲದಕ್ಕೂ ಜಿಲ್ಲಾಧಿಕಾರಿಯವರನ್ನೇ ವಿಚಾರಿಸಿ ಎಂದು ಉತ್ತರ ನೀಡುತ್ತಾ, ಬೆಳೆ ನಾಶ ಮಾಡಲು ಕರೆ ತರಲಾಗಿದ್ದ ಜೆಸಿಬಿಗೆ ಆಜ್ಞೆ ನೀಡಿಯೇ ಬಿಟ್ಟ.

ಪ್ರತಿಭಟನೆ-ಬಂಧನ

ನೋಡು-ನೋಡುತ್ತಿದಂತೆಯೇ ಬೆಳೆದು ನಿಂತ ಭತ್ತದ ನಾಟಿ ಜೆಸಿಬಿ ಯಂತ್ರದ ಬಾಯಿಗೆ ಆಹಾರವಾಗತೊಡಗಿತು. ಮತ್ತು ಕಳೆದ 30 ವರ್ಷಗಳಿಂದಲೂ 23 ಕುಟುಂಬಗಳ ಜೀವನಾಧಾರವಾಗಿದ್ದ ಭೂಸಂಬಂಧವನ್ನೇ ಮನುಷ್ಯನಿಂದ ಬೇರ್ಪಡಿಸತೊಡಗಿತು. ಜಿಲ್ಲಾಡಳಿತದ ಈ ರೈತ ವಿರೋಧಿ ಕ್ರಮದ ವಿರುದ್ಧ ಮತ್ತು ಅಮಾನವೀಯ ಕೃತ್ಯವನ್ನು ಖಂಡಿಸುತ್ತಿರುವಾಗಲೇ ಜೊತೆಯಾದವರು ರೈತ ಹೋರಾಟಗಾರ ಆವರಗೆರೆ ರುದ್ರಮುನಿಯವರು. ಸ್ಥಳದಲ್ಲಿದ್ದ ಎಲ್ಲಾ ರೈತ ಕುಟುಂಬಗಳಿಗೆ ಧೈರ್ಯವನ್ನು ತುಂಬಿ ಘೋಷಣೆಗಳನ್ನು ಕೂಗುತ್ತಾ ಬೆಳೆದ ಬೆಳೆಯನ್ನು ನಾಶ ಪಡಿಸುತ್ತಿದ್ದ ಜೆಸಿಬಿ ಯಂತ್ರದತ್ತ ಎಲ್ಲರೂ ಮುನ್ನುಗ್ಗಿ ಘೋಷಣೆಗಳನ್ನು ಕೂಗಿ, ತಡೆಯೊಡ್ಡಿದೆವು. ಆದರೆ ಸಶಸ್ತ್ರ ಪೋಲೀಸರೊಂದಿಗೆ ಬಂದಿದ್ದ ಅಧಿಕಾರಿಗಳು ತಮ್ಮ ಕೆಲಸಕ್ಕೆ ಅಡ್ಡಿ ಪಡಿಸಿದರೆಂಬ ಕಾರಣದಿಂದಾಗಿ ಆವರಗೆರೆ ರೈತರಾದ ರುದ್ರಮುನಿ, ಹೊನ್ನ, ಕರಿಯಪ್ಪ, ನಾಗಪ್ಪ ಮತ್ತು ಯುವ ಮುಖಂಡರಾದ ಕೆ.ಮಹಾಂತೇಶ್‌ರನ್ನು ಬಲತ್ಕಾರವಾಗಿ ಬಂಧಿಸಿ ಪೋಲೀಸ್ ಠಾಣೆಗೆ ಕರೆತಂದು ನಮ್ಮ ವಿರುದ್ಧಕೇಸನ್ನು ಸಹ ದಾಖಲು ಮಾಡಿಕೊಳ್ಳಲಾರದೆ ಮತ್ತು ನಮ್ಮನ್ನು ಬಿಡುಗಡೆ ಸಹ ಮಾಡಲಾರದೇ ರಾತ್ರಿ ಒಂಬತ್ತು ಗಂಟೆಯವರೆಗೂ ಸತಾಯಿಸಿ ಕೊನೆಗೆ ಬಿಡುಗಡೆಗೊಳಿಸಿದರು. ಆದರೆ ಅಷ್ಟೊತ್ತಿಗಾಗಲೇ ಅಧಿಕಾರಶಾಹಿಯು ತನ್ನ ಅಧಿಕಾರವನ್ನು ಬಳಸಿ 20 ಎಕರೆ ಜಮೀನಿನಲ್ಲಿ ಬೆಳೆದು ನಿಂತಿದ್ದ ಭತ್ತದ ನಾಟಿಯನ್ನು ನಾಶಪಡಿಸಿತ್ತು.

ಆವರಗೆರೆಗೆ ಸಂಬಂಧಿಸಿದಂತೆ 187 ಎಕರೆ ಗೋಮಾಳ ಜಮೀನಿದ್ದರೂ ವಾಸ್ತವವಾಗಿ ಆ ಗ್ರಾಮದ 23 ಕುಟುಂಬಗಳು ಕೇವಲ 22 ಎಕರೆ ಜಮೀನನ್ನು ಮಾತ್ರ ವ್ಯವಸಾಯ ಮಾಡುತ್ತಿವೆ. ಉಳಿದ ನೂರಾರು ಎಕರೆ ಜಾಗವನ್ನು ದೊಡ್ಡ ಕೈಗಾರಿಕೋದ್ಯಮಿಗಳು ಆಕ್ರಮಿಸಿಕೊಂಡಿದ್ದಾರೆ. ಅದೇ ಜಾಗದಲ್ಲಿಯೇ ಕರ್ನಾಟಕ ರಾಜ್ಯ ಬೀಜ ನಿಗಮ ಮತ್ತು ರಸ್ತೆ ಸಾರಿಗೆ ಸಂಸ್ಥೆಯ ಕಾರ್ಯಾಗಾರಗಳು ತಲೆ ಎತ್ತಿವೆ. ರೈತರು ತಮ್ಮ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡಲು ಕಳೆದ ಎರಡು ದಶಕಗಳಿಂದಲೂ ಹೋರಾಟದ ಹಾದಿಯಲ್ಲಿ ಮುನ್ನಡೆದಿದ್ದಾರೆ. ಅಲ್ಲದೆ ಬಗರ್‌ಹುಕುಂ ಸಾಗುವಳಿ ಮಾಡುವ ರೈತರ ಭೂಮಿಯನ್ನು ಸಕ್ರಮಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಈ ಹಿಂದೆ ಶಿಫಾರಸು ಮಾಡಿದ್ದಾರೆ. ಇದಕ್ಕೆ ಯಾವುದೇ ಆಕ್ಷೇಪಣೆಗಳು ಬಾರದಿರುವುದರಿಂದ ಸರ್ಕಾರವೇ, ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ರಚಿಸಿದ್ದ ಅಕ್ರಮ ಭೂಮಿ ಸಕ್ರಮ ಸಮಿತಿ ಯು ಕೂಡ 23 ರೈತ ಕುಟುಂಬಗಳಿಗೆ ಭೂಮಿ ನೀಡಲು ಶಿಫಾರಸು ಮಾಡಿದೆ. ಅಲ್ಲದೆ ಈ ಭೂಮಿಗೆ ರೈತರು ಹಲವಾರು ಬಾರಿ ಕಂದಾಯ ಕಟ್ಟಿದ ದಾಖಲೆಯು ಇದೆ. ಜೊತೆಗೆ 23 ಜನರನ್ನೊಳಗೊಂಡಂತೆ ಜಂಟಿಪಾಣಿ ಯನ್ನು ಸಹಾ ನೀಡಲಾಗಿದೆ.

ಪರಿಸ್ಥಿತಿ ಹೀಗಿರುವಾಗ ಆಗಸ್ಟ್ 3 ರಂದು ಜಿಲ್ಲಾಡಳಿತವು ರೈತರಿಗೆ ಯಾವುದೇ ಮಾಹಿತಿಯನ್ನು ನೀಡದೆ ಬುಲ್ಡೋಜರ್ ಮೂಲಕ ಜಮೀನಿಗೆ ಧಾಳಿ ಇಟ್ಟು ಭತ್ತದ ಬೆಳೆಯನ್ನು ಅಮಾನವೀಯವಾಗಿ ನಾಶಗೊಳಿಸಿದೆ.

ಧರಣಿ ಸತ್ಯಾಗ್ರಹ ಆರಂಭ......

ಜಿಲ್ಲಾಧಿಕಾರಿಗಳ ಈ ರೈತ ವಿರೋಧಿ, ಬಡವರ ವಿರೋಧಿ ಕೃತ್ಯಗಳನ್ನು ಖಂಡಿಸಿ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಕಮ್ಯುನಿಸ್ಟ್ ಪಕ್ಷದ ದೋಣೆಹಳ್ಳಿ ಗುರುಮೂರ್ತಿ, ರೈತ ಮುಖಂಡರಾದ ರುದ್ರಮುನಿ, ಶೇಖರ ನಾಯ್ಕ, ಮಲ್ಲೇಶಪ್ಪ ನವರ ನೇತೃತ್ವದಲ್ಲಿ 23 ಕುಟುಂಬಗಳು ಸಭೆ ನಡೆಸಿ ರೈತರ ಜಮೀನಿನ ಬೆಳೆ ನಾಶವನ್ನು ಪ್ರತಿಭಟಿಸಿ ಮತ್ತು ಹಕ್ಕುಪತ್ರಕ್ಕಾಗಿ ಒತ್ತಾಯಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಸತ್ಯಾಗ್ರಹ ಪ್ರಾರಂಭಿಸಲು ನಿರ್ಧರಿಸಿದರು. ಅದರಂತೆ ಆಗಸ್ಟ್ 3 ರಿಂದ ನೊಂದ ರೈತರು ಅವರಕುಟುಂಬದ ಮಹಿಳೆಯರು, ಯುವಕರು ಈ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡರು.

ವ್ಯಾಪಕ-ಬೆಂಬಲ: ಜಿಲ್ಲಾಡಳಿತದ ಈ ಕ್ರಮವನ್ನು ವಿರೋಧಿಸಿ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗತೊಡಗಿದೆ. ಶಿಬಿರಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ, ಎಐಟಿಯುಸಿ ಮುಖಂಡರಾದ ಜೆ.ಎಂ. ಹನುಮಂತಪ್ಪ, ಹೆಚ್.ಕೆ.ರಾಮಚಂದ್ರಪ್ಪ, ವಿಮಾ ನೌಕರರ ಸಂಘದ ಮುಖಂಡರಾದ ಕೆ.ಎಲ್.ಭಟ್, ನಾಗರಾಜ್, ಬ್ಯಾಂಕ್ ನೌಕರರ ಸಂಘಟನೆಯ ಜಿಲ್ಲಾ ಮುಖಂಡರಾದ ಹನುಮಂತರಾವ್, ರಾಜ್ಯ ರೈತ ಸಂಘದ ಜಿಲ್ಲಾ ಸಂಚಾಲಕ ಹೊನ್ನೂರು ಮುನಿಯಪ್ಪ, ಎಸ್.ಎಫ್‌ಐ ಜಿಲ್ಲಾಧ್ಯಕ್ಷ ಇ. ಶ್ರೀನಿವಾಸ್, ಜನತಾದಳ (ಯು) ಮುಖಂಡ, ಬಿ.ಎಂ.ಹನುಮಂತಪ್ಪ, ಕಾಂಗ್ರೆಸ್ ಮುಖಂಡ ಎನ್.ಎಂ.ಆಂಜನೇಯ, ಪತ್ರಕರ್ತ ಟಿ.ಎನ್.ಷಣ್ಮುಖ, ಬರಹಗಾರ ಕಡಕೊಳ ಮೊದಲಾದವರು ಬೆಂಬಲ ಸೂಚಿಸಿ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರು - ಜಿಲ್ಲಾಧಿಕಾರಿ ಭೇಟಿ

ಧರಣಿ ಸತ್ಯಾಗ್ರಹ ಪ್ರಾರಂಭವಾಗುತ್ತಿದ್ದಂತೆ, ರೈತರಿಗೆ ಆ ಜಮೀನಿನಲ್ಲಿ ಇರುವ ಕಾನೂನುಬದ್ಧ ಹಕ್ಕುಗಳನ್ನು ಸಮರ್ಥಿಸುವ ದಾಖಲನೆಗಳೊಳಗೊಂಡ ಮನವಿ ಪತ್ರಗಳನ್ನು ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಸ್ಥಳೀಯ ಶಾಸಕರಾದ ಎಸ್.ಎ.ರವೀಂದ್ರನಾಥ ಮತ್ತು ಮಾಜಿ ಲೋಕಸಭಾ ಸದಸ್ಯರಾದ ಶಾಮನೂರು ಶಿವಶಂಕರಪ್ಪನವರಿಗೆ ಸಲ್ಲಿಸಿ ರೈತ ಕುಟುಂಬಗಳಿಗೆ ಹಕ್ಕು ಪತ್ರ ನೀಡಲು ಒತ್ತಾಯಿಸಲಾಯಿತು.

ಪರ್ಯಾಯ ವ್ಯವಸ್ಥೆಗೆ ರೈತರಿಂದ ವಿರೋಧ:

ರೈತರ ಹೋರಾಟದ ವ್ಯಾಪಕ ಬೆಂಬಲ ಎಲ್ಲಾ ವಿಭಾಗಗಳಿಂದ ವ್ಯಕ್ತವಾಗುತ್ತಿದ್ದಂತೆ ಜಿಲ್ಲಾ ಉಸ್ತುವಾರಿ ಮಂತ್ರಿ ಎಸ್.ಎಸ್. ಮಲ್ಲಿಕಾರ್ಜುನ್ ರವರು ಜಿಲ್ಲಾಧಿಕಾರಿಗಳು ಬೇರೆ ಕಡೆಯಲ್ಲಿ ಜಮೀನನ್ನು ತೋರಿಸಿದರೆ ಪರ್ಯಾಯ ವ್ಯವಸ್ಥೆ ಮಾಡುವುದಾಗಿ ಹೇಳಿದಾಗ-ರೈತ ಕುಟುಂಬಗಳಿಂದ ತೀವ್ರ ವಿರೋಧ ಬಂತು ಮತ್ತು ನಮ್ಮ ಭೂಮಿಯನ್ನು ನಮಗೆ ಬಿಟ್ಟುಬಿಡಿ ಎಂದು ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದರು. ಈ ಸಮಸ್ಯೆಯನ್ನು ಒಂದೆರಡು ದಿನಗಳಲ್ಲಿ ಬಗೆಹರಿಸುವ ಭರವಸೆ ನೀಡಿ ಮಂತ್ರಿಗಳು ಹೊರಟು ಹೋದರು.

ರೈತರ ಬೆಳೆ ನಾಶ ಮಾಡಿದ ಸ್ಥಳಕೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಭೇಟಿ ನೀಡಿ ಅಧಿಕಾರಶಾಹಿ ದೌರ್ಜನ್ಯವನ್ನು ಕಣ್ಣಾರೆ ಕಂಡರು.

ನಂತರದಲ್ಲಿ ಧರಣಿ ಸ್ಥಳಕೆ ಆಗಮಿಸಿದ ಅವರು ರೈತರ ಬೆಳೆನಾಶ ಪ್ರಕರಣ, ಇದೊಂದು ಅಧಿಕಾರಶಾಹಿ ದೌರ್ಜನ್ಯದ ಪರಮಾವಧಿಯಾಗಿದೆ ಇಂತಹ ಕೃತ್ಯಗಳ ವಿರುದ್ಧ ನಿಮ್ಮ ಹೋರಾಟ ಮುಂದುವರೆಯಲಿ. ಎಲ್ಲ ರೀತಿಯ ಬೆಂಬಲವನ್ನು ನಮ್ಮ ಸಂಘವು ನೀಡಲಿದೆ ಎಂದರು. ಅಲ್ಲದೆ ಎಲ್ಲಾ ರೀತಿಯ ಹಕ್ಕನ್ನು ಭೂಮಿಯ ಮೇಲೆ ನೀವು ಹೊಂದಿರುವುದರಿಂದ ಕಾನೂನು ಮೂಲಕವು ನಿಮ್ಮ ಹೋರಾಟ ನಡೆಯಲಿ ಎಂದರು.

ಈ ವಾರದಲ್ಲಿ ಜಿಲ್ಲಾಧಿಕಾರಿಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ಬರದಿದ್ದಲ್ಲಿ ಹಂತ ಹಂತವಾಗಿ ಈ ಚಳುವಳಿಯನ್ನು ತೀವ್ರಗೊಳಿಸಲು ಮತ್ತು ನ್ಯಾಯಾಲಯದ ಮೂಲಕವು ಜಯವನ್ನು ಪಡೆಯಲು, ಬಗರ್‌ಹುಕುಂ ರೈತರ ಹೋರಾಟ ಸಮಿತಿಯು ನಿರ್ಧರಿಸಿದೆ.



ರೈತರ ಅಹವಾರು ಸ್ವೀಕರಿಸುತ್ತಿರುವ ಜಿಲ್ಲಾಧಿಕಾರಿ ಕೆ.ಶಿವರಾಮು

ಜಿಲ್ಲಾಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗೆ ನಂಜುಂಡಸ್ವಾಮಿ ಕರೆ

ಜಿಲ್ಲಾಧಿಕಾರಿಯು ತನ್ನ ವೈಯಕ್ತಿಕ ನೆಲೆಯಲ್ಲಿ ಕೃತ್ಯ ಎಸಗಿರುವುದರಿಂದ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕೆಂದು ಧರಣಿ ಸತ್ಯಾಗ್ರಹಕೆ ಭೇಟಿ ನೀಡಿದ. ರೈತ ಸಂಘದ ರಾಜ್ಯ ಅಧ್ಯಕ್ಷ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಕರೆ ನೀಡಿದರು. ಮತ್ತು ಎಲ್ಲಾ ರೈತ ಕುಟುಂಬಗಳು ಇತರೆ ರೈತ ಸಂಘಟನೆಗಳ ಕಾರ್ಯಕರ್ತರೊಂದಿಗೆ ಸೇರಿ ಸಾಮೂಹಿಕವಾಗಿ ಭೂ ಉಳುಮೆಯನ್ನು ಮಾಡಬೇಕೆಂದು ಅದಕ್ಕೂ ನಾವು ನೇತೃತ್ವ ನೀಡಲು ಸಾಧ್ಯವೆಂದು ಹೇಳಿದರು. ನಂತರದಲ್ಲಿ ಈ ಬಗ್ಗೆ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದಲ್ಲದೆ ಜಿಲ್ಲಾಡಳಿತವು ಬೆಳೆ ನಾಶ ಮಾಡಿದ ಸ್ಥಳಕೂ ಭೇಟಿ ನೀಡಿ ವೀಕ್ಷಿಸಿದರು.

ಜನರಕ್ಷಣೆಗೆ ವ್ಯಾಪಕಗೊಳ್ಳಬೇಕಾದ ಪ್ರತಿರೋಧ

ರಾಷ್ಟ್ರ ಹಾಗೂ ಅಂತರ್ರಾಷ್ಟ್ರೀಯ ರಂಗದಲ್ಲಿ ಗಮನಾರ್ಹ ಪಾತ್ರ ವಹಿಸುತ್ತಿರುವ ನಾಡಿನ ದುಡಿವ ಜನರ ಹಿತಗಳಿಗೆ ಸದಾ ಹೋರಾಡುವ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸಭೆ ಜನತೆಯನ್ನು ಬಾಧಿಸುವ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ವ್ಯಾಪಕ ಹೋರಾಟದ ಕಾರ್ಯಕ್ರಮ ರೂಪಿಸಿದೆ. ಇತ್ತೀಚಿನ ವಿದ್ಯಮಾನಗಳ ವಿಶ್ಲೇಷಣೆ, ಅಂಶಗಳು ಇಲ್ಲಿವೆ

ಕಳೆದ ಮೂರು ತಿಂಗಳಲ್ಲಿ ವಾಜಪೇಯಿ ಸರ್ಕಾರದ ಆರ್ಥಿಕ ನೀತಿ ಮತ್ತು ಅದರ ಕೆಟ್ಟ ಪರಿಣಾಮಗಳು ಗಂಭೀರವಾಗಿವೆ. ಬಜೆಟ್ ಅಧಿವೇಶನದ ನಂತರ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ವಿದೇಶಿ ಬಂಡವಾಳಕೆ ವಿನಾಯ್ತಿ ಮತ್ತು ಜನರ ಮೇಲಿನ ಹೊರೆ ಹೆಚ್ಚಿದೆ.

ರೈತರಿಗೆ ಹೊಡೆತ: ಅನೇಕ ಕೃಷಿ ಉತ್ಪನ್ನಗಳಿಗೆ ಆಮದಿನ ಮೇಲಿದ್ದ ತಡೆಯನ್ನು ತೆರವುಗೊಳಿಸಿದ ಕಾರಣದಿಂದಾಗಿ ದೇಶದ ರೈತರ ಮೇಲೆ ದೊಡ್ಡ ಹೊಡೆತ ಬೀಳಲಿದೆ. ಆಮದು ಉದಾರೀಕರಣದಿಂದಾಗಿ ನಮ್ಮ ರೈತರು ಉತ್ಪಾದಿಸುವ ಕಾಫಿ, ಚಹಾ, ಹಾಲು, ತೆಂಗಿನ ಕಾಯಿಗಳು ಮುಂತಾದವುಗಳ ಬೆಲೆ ಕುಸಿದಿದೆ. ಸಣ್ಣ ವ್ಯಾಪಾರದಾರರು, ಸಣ್ಣ ಕೈಗಾರಿಕೆಗಳು ಉದಾರೀಕರಣ ನೀತಿಯಿಂದಾಗಿ ಅಪಾಯದಲ್ಲಿವೆ.

ಶಾಕ್ ನೀಡುವ ವಿದ್ಯುತ್ ದರ: ವಿದ್ಯುತ್ ಉತ್ಪಾದನೆ, ವಿತರಣೆಯ ಖಾಸಗೀಕರಣದಿಂದಾಗಿ ಎಲ್ಲಾ ತರಹದ ವಿದ್ಯುತ್ ಬಳಕೆದಾರರು ತೊಂದರೆಗೊಳಗಾಗಲಿದ್ದಾರೆ. ಖಾಸಗೀಕರಣದಿಂದಾಗಿ ಪ್ರತಿ ಯೂನಿಟ್ ವಿದ್ಯುತ್ ಬೆಲೆ ವಿಪರೀತ ಹೆಚ್ಚಲಿದೆ. ಆಂಧ್ರಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ಸರ್ಕಾರ ಸಾಮಾನ್ಯ ಜನರ ಮೇಲೆ ವಿದ್ಯುತ್ ದರದ ಹೊರೆ ಹೆಚ್ಚಿಸಿದೆ. ಈ ಏರಿಕೆಯ ವಿರುದ್ಧ ಎಲ್ಲ ಕಡೆ ಪ್ರತಿಭಟನೆ ಸಂಘಟಿಸಲು ಸಿಪಿಐ(ಎಂ) ನಿರ್ಧರಿಸಿದೆ.

ಆಂಧ್ರಪ್ರದೇಶದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ನಡೆಯುತ್ತಿರುವ ವಿದ್ಯುತ್ ದರ ಏರಿಕೆ ವಿರೋಧಿ ಹೋರಾಟವನ್ನು ದೇಶಾದ್ಯಂತ ಬೆಂಬಲಿಸಬೇಕಿದೆ. ಪೋಲೀಸರ ದಬ್ಬಾಳಿಕೆಯ ನಡುವೆಯೂ ಕಳೆದ 6 ವಾರಗಳಿಂದ ಹೋರಾಟ ನಡೆಯುತ್ತಿದೆ. ಎಲ್ಲಾ ರಾಜ್ಯಗಳು ಆಂಧ್ರದ ಹೋರಾಟ ಬೆಂಬಲಿಸಲು ಹಾಗೂ ಕೇಂದ್ರ ಸರ್ಕಾರದ ವಿದ್ಯುತ್ ನೀತಿ ಪ್ರತಿಭಟಿಸಿ ಆಗಸ್ಟ್ 24 ರಂದು ಮೆರವಣಿಗೆ, ಧರಣಿ ನಡೆಸಲು ನಿರ್ಧರಿಸಲಾಗಿದೆ.

ಕೇಂದ್ರದ ಉದಾರೀಕರಣದಿಂದಾಗಿ ವ್ಯವಸಾಯೋತ್ಪನ್ನಗಳ ಬೆಲೆ ಕುಸಿಯುತ್ತಿರುವುದನ್ನು ವಿರೋಧಿಸಿ ಸಹ ಹೋರಾಟ ರೂಪಿಸಲಾಗುವುದು.

ಪ.ಬಂಗಾಳ: ಭೂಮಾಲೀಕರ ಪರವಾದ ತೃಣಮೂಲ-ಬಿಜೆಪಿ ಶಕ್ತಿಗಳು ಪ.ಬಂಗಾಳದಲ್ಲಿ ಎಡ ಪಕ್ಷಗಳ ಅದರಲ್ಲೂ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ನಿರಂತರ ಹಲ್ಲೆ ನಡೆಸುತ್ತಿವೆ. ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರದ ಪ್ರಮುಖ ಸಾಧನೆಯಾದ ಭೂ ಸುಧಾರಣೆಯನ್ನು ಹಿಂದೆಗೆಯಲು ಈ ಶಕ್ತಿಗಳು ಪ್ರಯತ್ನಿಸುತ್ತಿವೆ. ಕಾಂಗ್ರೆಸ್ ಪಕ್ಷವು ಅವಕಾಶವಾದಿತನವನ್ನು ಪ್ರದರ್ಶಿಸುತ್ತಿದ್ದು ಸಿಪಿಐ(ಎಂ) ವಿರೋಧಿ ಗುಂಪು ಸೇರಲು ಯತ್ನಿಸುತ್ತಿದೆ.

ತ್ರಿಪುರ: ತ್ರಿಪುರಕ್ಕೆ ಸೇನೆಯನ್ನು ಕಳುಹಿಸುವಲ್ಲಿ ಮಲತಾಯಿ ಧೋರಣೆ ತೋರುತ್ತಿರುವ ಕೇಂದ್ರದ ವಾಜಪೇಯಿ ಸರ್ಕಾರವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಖಂಡಿಸಿದೆ. ತ್ರಿಪುರಾಕ್ಕೆ ಎಲ್ಲಾ ನೆರವು ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ನಿರ್ಧರಿಸಿತು.

ಕೇರಳ: ಪಿಯುಸಿ ವಿಷಯ ತೆಗೆದುಕೊಂಡು ಹಿಂಸಾತ್ಮಕ ಚಳುವಳಿಯಲ್ಲಿ ಕಾಂಗ್ರೆಸ್ ತೊಡಗಿಕೊಂಡಿರುವುದನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಖಂಡಿಸಿದೆ. ಎಡ ಪ್ರಜಾಸತ್ತಾತ್ಮಕ ರಂಗವನ್ನು ವಿರೋಧಿಸಲು ಬಿಜೆಪಿಯೊಂದಿಗೆ ಕೈ ಜೋಡಿಸುವುದಕ್ಕೂ ಕಾಂಗ್ರೆಸ್ ಹಿಂಜರಿಯುತ್ತಿಲ್ಲ.

ಎಡ ಶಕ್ತಿಗಳ ಮೇಲೆ ಹಲ್ಲೆ

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದನಂತರ ಎಡ ಪಕ್ಷಗಳು ಬಲವಾಗಿರುವ ತ್ರಿಪುರ, ಕೇರಳ, ಪ.ಬಂಗಾಲಗಳಲ್ಲಿ ಎಡ ಪಕ್ಷಗಳ ಕಾರ್ಯಕರ್ತರ ಮೇಲಿನ ಹಿಂಸಾಚಾರ ಹೆಚ್ಚಿದೆ. ಸಾಮ್ರಾಜ್ಯಶಾಹಿ ಪ್ರೇರಿತ ಉದಾರೀಕರಣವನ್ನು ಎಡ ಪಕ್ಷಗಳು ವಿರೋಧಿಸುತ್ತಿವೆ. ಈ ಕಾರಣದಿಂದಾಗಿ ಎಲ್ಲ ಪ್ರತಿಗಾಮಿ ಶಕ್ತಿಗಳು ಕೂಡಿಕೊಂಡು ಎಡ ಪಕ್ಷಗಳ ಮೇಲೆ ಹಲ್ಲೆ ಆರಂಭಿಸಿವೆ.

ರಾಜ್ಯ ಸ್ವಾಯತ್ತತೆ : ರಾಜ್ಯಗಳಿಗೆ ಸ್ವಾಯತ್ತತೆ ನೀಡುವುದು ಅಗತ್ಯವಾಗಿದೆ. ಈ ಹಿಂದಿನ ಸರ್ಕಾರಗಳು ಕೇಂದ್ರ-ರಾಜ್ಯ ಸಂಬಂಧ ಪುನರ್ರಚನೆ ಕಡೆ ಗಮನ ಹರಿಸುವಲ್ಲಿ ವಿಫಲಗೊಂಡಿದೆ. ರಾಜ್ಯಗಳ ಹಕ್ಕುಗಳನ್ನು ಕಡೆಗಣಿಸಲಾಗುತ್ತಿದ್ದು ಹನ್ನೊಂದನೆ ಆರ್ಥಿಕ ಆಯೋಗವು ರಾಜ್ಯಗಳಿಗೆ ಅನ್ಯಾಯ ಎಸಗಿದೆ. ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡುವ ಬಗ್ಗೆ ಸಾರ್ವಜನಿಕ ಚರ್ಚೆ ನಡೆಸುವ ಉದ್ದೇಶದಿಂದ ರಾಜ್ಯ ಮಟ್ಟದ ಸಮಾವೇಶ ಸಂಘಟಿಸಲು ಸಿಪಿಐ(ಎಂ) ತೀರ್ಮಾನಿಸಿದೆ.

ಅಮೆರಿಕ ಕ್ಷಿಪಣಿ ಕಾರ್ಯಕ್ರಮ ನಿಲ್ಲಲಿ

ಅಮೆರಿಕಾ ಆರಂಭಿಸಿರುವ ರಾಷ್ಟ್ರೀಯ ಕ್ಷಿಪಣಿ ಕಾರ್ಯಕ್ರಮ ಅತ್ಯಂತ ಅಪಾಯಕಾರಿಯಾಗಿದೆ. ಇದರಿಂದಾಗಿ ಪ್ರಪಂಚದಲ್ಲಿ ಅಸ್ತ್ರಗಳನ್ನು ಕಡಿತಗೊಳಿಸಬೇಕೆಂಬ ಪ್ರಯತ್ನಕೆ ಹಿನ್ನಡೆಯುಂಟಾಗಲಿದೆ. ಪ್ರಪಂಚದಲ್ಲಿ ತನ್ನ ಪ್ರಾಬಲ್ಯ ಸ್ಥಾಪಿಸಲು ಅಮೆರಿಕಾ ಈ ಹೊಸ ಕ್ಷಿಪಣಿ ಕಾರ್ಯಕ್ರಮ ಆರಂಭಿಸಿದೆ. ಆದರೆ ಅದೇ ಸಂದರ್ಭದಲ್ಲಿ ತನ್ನ ಪ್ರಾಬಲ್ಯವನ್ನು ವಿರೋಧಿಸುವ ಇತರ ದೇಶಗಳನ್ನು ದಗಲ್ಬಾಜಿಗಳೆಂದು ಕರೆಯುತ್ತಿದೆ. ಅಮೆರಿಕಾದ ಈ ಪ್ರಯತ್ನಕ್ಕೆ ಪ್ರಪಂಚದೆಲ್ಲೆಡೆ ವ್ಯಕ್ತವಾಗುತ್ತಿರುವ ವಿರೋಧವನ್ನು ರಷ್ಯಾ ಮತ್ತು ಚೈನಾದ ಮುಖಂಡರು ವಿರೋಧಿಸಿರುವುದು ಸ್ವಾಗತಾರ್ಹ. ವಾಜಪೇಯಿ ಸರ್ಕಾರವೂ ಅಮೆರಿಕಾದ ಈ ಪ್ರಯತ್ನದ ವಿರುದ್ಧ ನಿಲುವು ತಳೆಯಬೇಕು.

ಪ್ಯಾಲೆಸ್ತೇನಿಯನ್ನರ ಹೋರಾಟ; ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಡುತ್ತಿರುವ ಪ್ಯಾಲೆಸ್ತೇನಿಯನ್ನರಿಗೆ ಬೆಂಬಲ ಅಗತ್ಯವಿದೆ. ಇದನ್ನು ವಿರೋಧಿಸುತ್ತಿರುವ ಇಸ್ರೇಲ್ ಹಾಗೂ ಇಸ್ರೇಲ್‌ನ ಕ್ರಮವನ್ನು ಬೆಂಬಲಿಸುತ್ತಿರುವ ಅಮೆರಿಕಾದ ಕ್ರಮ ವಿರೋಧಿಸಬೇಕಿದೆ.

ಶ್ರೀಲಂಕಾ: ಶ್ರೀಲಂಕಾದ ವ್ಯಾಪ್ತಿಯಲ್ಲೇ ತಮಿಳರಿಗೆ ಸ್ವಾಯತ್ತತೆ ನೀಡುವ ಪ್ರಯತ್ನ ಸ್ವಾಗತಾರ್ಹ. ಈ ಬಗ್ಗೆ ಪ್ರಯತ್ನಗಳು ಮುಂದುವರೆಯಬೇಕು.

ಜಮ್ಮು-ಕಾಶ್ಮೀರ: ಜಮ್ಮು ಮತ್ತು ಕಾಶ್ಮೀರದ ಸ್ವಾಯತ್ತತೆ ಪ್ರಶ್ನೆಯ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿ ಚರ್ಚಿಸಿದ್ದು ಸಂವಿಧಾನದ ಮಿತಿಯೊಳಗೇ ಜಮ್ಮು ಕಾಶ್ಮೀರಕೆ ಹೆಚ್ಚಿನ ಸ್ವಾಯತತ್ತಗೆ ಒತ್ತಾಯಿಸಿದೆ.

ತಕ್ಷಣದ ಕರ್ತವ್ಯಗಳು

ಮುಂದಿನ ದಿನಗಳಲ್ಲಿ ಕೆಳಕಂಡ ಕಾರ್ಯಕ್ರಮಗಳನ್ನು ಸಂಘಟಿಸಲು ಕೇಂದ್ರ ಸಮಿತಿಯೋಜಿಸಿದೆ.

1. ರಾಜ್ಯಗಳ ಸ್ವಾವಲಂಬನೆ ಪ್ರಶ್ನೆ ಕುರಿತು ರಾಜ್ಯ ಮಟ್ಟದ ಸಮಾವೇಶಗಳನ್ನು ಪ್ರಮುಖ ಕೇಂದ್ರಗಳಲ್ಲಿ ಆಗಸ್ಟ್‌ನಲ್ಲಿ ಸಂಘಟಿಸುವುದು.
2. ವಿದ್ಯುತ್ ಕ್ಷೇತ್ರದ ಖಾಸಗೀಕರಣ, ವಿದ್ಯುತ್ ದರ ಏರಿಕೆ ವಿರೋಧಿಸಿ ಇತರ ಎಡ ಪಕ್ಷಗಳೊಂದಿಗೆ ಕೂಡಿಕೊಂಡು ಜಂಟಿ ಹೋರಾಟವನ್ನು ಆಗಸ್ಟ್‌ನಲ್ಲಿ ರೂಪಿಸುವುದು(24 ರಂದು ಮೆರವಣಿಗೆ, ಧರಣಿ)
3. ಕೇಂದ್ರದ ಆಮದು ನೀತಿಯಿಂದಾಗಿ ವ್ಯವಸಾಯೋತ್ಪನ್ನಗಳ ಬೆಲೆ ಕುಸಿದಿರುವುದನ್ನು ವಿರೋಧಿಸಿ ಪ್ರತಿಭಟನೆ ರೂಪಿಸುವುದು.
4. ಅಲ್ಪಸಂಖ್ಯಾತರ ಮೇಲೆ ಅದರಲ್ಲೂ ಕ್ರಿಶ್ಚಿಯನ್ನರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಖಂಡಿಸಿ ಪಕ್ಷದ ಶಾಖೆಗಳು ಕಾರ್ಯಕ್ರಮ ರೂಪಿಸುವುದು.

○

ಕಾಶ್ಮೀರ : ಜನತೆಗೆ ಬೇಕಾಗಿರುವುದು ಶಾಂತಿ

ಜುಲೈ 24 ರಂದು ಹಿಜಬುಲ್ ಮುಜಾಹಿದ್ದೀನ್‌ನಿಂದ ಸ್ವಯಂ ಗುಂಡು ಹಾರಿಸುವುದಕ್ಕೆ ವಿರಾಮಘೋಷಣೆ ಕಾಶ್ಮೀರದಲ್ಲಿ ಕ್ಷಿಪ್ರ ಬೆಳವಣಿಗೆಗಳಿಗೆ ಕಾರಣವಾಗಿ ಆಗಸ್ಟ್ 8 ಕ್ಕೆ ಅಲ್ಪಕಾಲದಲ್ಲೇ ಹಿಜಬುಲ್ ತನ್ನ ನಿಲುಮೆಯಿಂದ ಹಿಂದಕ್ಕೆ ಹೋಗಿದ್ದು, ಕಾಶ್ಮೀರ ಜನತೆಯಲ್ಲಿ ನಿರಾಶೆ ಉಂಟುಮಾಡಿದೆ. ಈ ಕಾಲಾವಧಿಯಲ್ಲಿ ಹಿಜಬುಲ್ ಪ್ರಕಟಣೆಯ ನಂತರ ಸರಕಾರ ಮಾತುಕತೆಗೆ ಮುಂದಾಗಿ ಚರ್ಚೆ ಆರಂಭವಾಗಿದ್ದು, ಈ ನಡುವೆಯೇ ಆಗಸ್ಟ್ 1 ಮತ್ತು 2 ರಂದು ತೀವ್ರವಾದಿ ಗುಂಪುಗಳಿಂದ ರಾಕ್ಷಸಿ ನರಮೇಧದಿಂದ ನೂರಾರು ಜನ ಪ್ರಾಣ ಕಳೆದುಕೊಂಡಿದ್ದು ನಡೆದುಹೋಗಿದೆ.

ಮಾತುಕತೆ ಮುರಿದು ಬೀಳಲು ತಕ್ಷಣದ ಕಾರಣ ಹಿಜಬುಲ್ ಮುಜಾಹಿದ್ದಿನ್ ಸಂಘಟನೆಯ ಚರ್ಚೆಗಳು ತ್ರಿಪಕ್ಷೀಯವಾಗಿ. ಪಾಕಿಸ್ತಾನ ಒಳಗೊಂಡು ನಡೆಯಬೇಕೆಂಬ ಷರತ್ತಿನಿಂದಾಗಿ. ಈ ಬೆಳವಣಿಗೆಗಳಿಗೆ ಕಾರಣವೇನು? ಕಾಶ್ಮೀರದ ಈ ಸಂಕೀರ್ಣ ಪರಿಸ್ಥಿತಿಯಲ್ಲಿ ಹಲವು ಅಂಶಗಳು ಕಾಣಬಹುದು. ತೆರೆಮರೆಯಲ್ಲೇ ಅಮೆರಿಕಾದ ಕೈವಾಡ ಮತ್ತು ಕಾಶ್ಮೀರದಲ್ಲಿರುವ ಫರೂಕ್ ಅಬ್ದುಲ್ಲಾರವರ ಸರಕಾರದ ನಿಲುಮೆ, ಹುರಿಯತ್ ಕಾನ್ಫರೆನ್ಸ್ ನಿಲುವುಗಳು ಸರಿಯಾದ ಪರಿಕಲ್ಪನೆಯಿಂದ ದೂರ ಸರಿಯಲು ಸಾಧ್ಯವಾಗಿದೆ.

ಕಾಶ್ಮೀರ ಕುರಿತು ದೇಶದ ಪ್ರಜಾಸತ್ತಾತ್ಮಕ ಶಕ್ತಿಗಳ ಮುಖ್ಯ ಕಾಳಜಿ ಅಲ್ಲಿನ ಕಾಶ್ಮೀರಿ ಜನತೆಯ ಕುರಿತಾಗಿದೆ. ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದಲ್ಲಿ ಕಾಶ್ಮೀರ ಭಾರತಕ್ಕೆ ಸೇರ್ಪಡೆ ಆದ ನಂತರ, ಆ ಜನರು ಭಾರತದೊಡನೆ ಐಕ್ಯತೆಯಿಂದ ಇರದೇ ಇರಲು ಬೇಕಾದ ಹಾನಿಕಾರಕ ಕ್ರಮಗಳು ಹಲವಾರು ನಡೆದುಹೋಗಿವೆ. ಕಾಶ್ಮೀರ ಜನತೆ ಭಾರತದೊಂದಿಗೆ ಐಕ್ಯವಾಗಿರಬೇಕೆಂಬ ಭಾವನೆ ಹೋಗುತ್ತಾ ಪರಕೀಯತೆಯ ಭಾವನೆಯಲ್ಲಿ ತೊಳಲಾಡುತ್ತಿರುವ ಪ್ರಶ್ನೆ ಬಗ್ಗೆ ಮುಖ್ಯವಾಗಿ ಗಮನ ಹರಿಸಬೇಕಾಗಿದೆ. ಈ ದಿಶೆಯಲ್ಲಿ ಹಲವು ನೀತಿಗಳನ್ನು ಅನುಸರಿಸುವ ಅಗತ್ಯವಿದೆ. ಕಾಶ್ಮೀರಕ್ಕೆ ಹೆಚ್ಚಿನ ಸ್ವಾಯತ್ತತೆ ಬೇಡಿಕೆ ಹಾಗೂ ಹಿಜಬುಲ್ ಮುಜಾಹಿದ್ದೀನ್ ಸಂಘಟನೆ ಮತ್ತು ಕೇಂದ್ರ ಸರಕಾರದ ಮಾತುಕತೆಗಳು ಕಾಶ್ಮೀರಿ ಜನತೆಯಲ್ಲಿ ಹೊಸ ಆಶಾಭಾವನೆಗಳನ್ನು ಚಿಗುರಿಸಿತ್ತು. ಆದರೆ ಆ ಪ್ರಯತ್ನಗಳು ಎಳೆದಾಟಕೆ ಒಳಗಾಗಿರುವುದು ಜನತೆಯಲ್ಲಿ ಬೇಸರವನ್ನು ಉಂಟುಮಾಡಿದೆ.

ವಾಜಪೇಯಿ ಸರಕಾರವು ಕಾಶ್ಮೀರಕ್ಕೆ ಹೆಚ್ಚಿನ ಸ್ವಾಯತ್ತತೆಯ ಬೇಡಿಕೆಯ ಬಗ್ಗೆ ಸಾರಾಸಗಟಾಗಿ ತಿರಸ್ಕರಿಸಿದ್ದು ದೊಡ್ಡ ತಪ್ಪು ಹೆಜ್ಜೆ ಆಗಿದೆ. ಸರಕಾರದ ಮಾತುಕತೆಗಳು ಭಾರತದಸಂವಿಧಾನದ ಚೌಕಟ್ಟಿನೊಳಗೆ ಮಾತ್ರ ಎಂಬ ವಾದಕ್ಕೆ ಅರ್ಥವೇ ಇಲ್ಲ. ಚರ್ಚೆಯ ಪ್ರಕ್ರಿಯೆಯಲ್ಲಿ ವಿಷಯಗಳನ್ನು ಬಗೆಹರಿಸಿಕೊಳ್ಳುತ್ತಾ ಹೋಗಲು ಸಾಧ್ಯ. ಈ ಬಗ್ಗೆ ತಡವಾಗಿಯಾದರೂ ಆಗಸ್ಟ್ 7 ರಂದು ಪ್ರಧಾನಮಂತ್ರಿಗಳು ಸ್ಪಷ್ಟೀಕರಣ ನೀಡಲು ಮುಂದಾದರು. ಆದರೂ ಪ್ರಧಾನಮಂತ್ರಿಗಳ ಸಹೋದ್ಯೋಗಿಗಳ ಹೇಳಿಕೆಗಳು ಗೊಂದಲವನ್ನು ಮುಂದುವರೆಸಿಕೊಂಡೇ ಹೋಗುತ್ತಿವೆ.

ಕಾಶ್ಮೀರ ಪ್ರಶ್ನೆಯು ಸ್ವಾತಂತ್ರ್ಯ ಪಡೆದ ಕಾಲದಿಂದಲೂ ಭಾರತ ಮತ್ತು ಪಾಕಿಸ್ತಾನದ ನಡುವೆ ವಿವಾದವಾಗಿ ಮುಂದುವರೆಯುತ್ತಲೇ ಇದೆ. ಈ ಕಾಲಾವಧಿಯಲ್ಲಿ ಮಿಲಿಟರಿ ಘರ್ಷಣೆಗಳು ನಡೆದಿವೆ. ಮಾತುಕತೆಗಳು ಎರಡು ಸರ್ಕಾರಗಳ ನಡುವೆ ಆಗಿವೆ. ಸಿಮ್ಲಾ ಒಪ್ಪಂದವು ಇಂತಹ ಪ್ರಯತ್ನಗಳ ಒಂದು ಫಲ. ಆದ್ದರಿಂದ ಪಾಕಿಸ್ತಾನದೊಂದಿಗೆ ಮಾತುಕತೆಗಳು ಸಾಧ್ಯವಿಲ್ಲವೆಂಬ ನಿಲುಮೆ ಸಮಂಜಸವಾದದ್ದಲ್ಲ. ಕಾರಣ ಹಿಜಬುಲ್ ಬೇಡಿಕೆಯಾದ ಪಾಕಿಸ್ತಾನದ ಪಾತ್ರದ ಬಗ್ಗೆ ತಳ್ಳಿ ಹಾಕುವಂತಿಲ್ಲ.


ಇಂತಹ ಸಂದರ್ಭದಲ್ಲಿ ಆವಶ್ಯಕವೆಂದರೆ ಕೆಲ ಕಾಲದ ಹಿಂದೆ ಸಿಪಿಐ(ಎಂ) ಪ್ರತಿಪಾದಿಸಿದ ಅಂಶಗಳನ್ನು ಪರಿಗಣಿಸುವುದು ಅಗತ್ಯ. ವಾಜಪೇಯಿ ಸರಕಾರವು ಮಿಲಿಟರಿ ಆಡಳಿತವಿರುವ ಕಾರಣ ಪಾಕಿಸ್ತಾನದೊಂದಿಗೆ ಮಾತನಾಡುವುದಿಲ್ಲವೆಂಬ ನಿಲುಮೆ ಕೈ ಬಿಡಬೇಕು ಅಥವಾ ಕಾಶ್ಮೀರಿ ಕಣಿವೆಯಲ್ಲಿ ಉಗ್ರವಾದಿಗಳನ್ನು ಪ್ರೋತ್ಸಾಹಿಸುವುದನ್ನು ನಿಲ್ಲಿಸಿದ ನಂತರ ಚರ್ಚೆ ಮುಂತಾದ ನಿಲುವು ಕೈಬಿಡಬೇಕು. ಪಾಕಿಸ್ತಾನದೊಂದಿಗೆ ದ್ವಿಪಕ್ಷೀಯ ಮಾತುಕತೆಯನ್ನು ಮುಂದುವರೆಸಿದ ಪ್ರಕ್ರಿಯೆಯಲ್ಲಿಯೇ ಕಾಶ್ಮೀರದೊಳಗಿನ ಗುಂಪುಗಳೊಂದಿಗೆ ಚರ್ಚಿಸಬಹುದು.

ವಾಜಪೇಯಿ ಸರಕಾರ ತಕ್ಷಣ ಸರಿಯಾದ ಧೋರಣೆಯನ್ನು ಅನುಸರಿಸಬೇಕು. ಈಗ ನೋಡಿದರೆ ಅಮೆರಿಕ ಆಡಳಿತದ ಮಾರ್ಗದಲ್ಲಿ ನಡೆದಂತಿದೆ. ಜಮ್ಮು ಕಾಶ್ಮೀರಕ್ಕೆ 370 ರ ಕಲಮಿನಡಿಯಲ್ಲಿ ಹೆಚ್ಚಿನ ಸ್ವಾಯತ್ತತೆ ನೀಡುವ ಪರವಾಗಿದೆಯೋ ಇಲ್ಲವೋ? ಇದು ಸ್ಪಷ್ಟವಾಗಬೇಕು. ಪಾಕಿಸ್ತಾನದ ಜೊತೆ ಮಾತುಕತೆಗೆ ಅಮೆರಿಕದ ಪ್ರಚೋದನೆಗಾಗಿ ಕಾಯಬೇಕಿಲ್ಲ. ಪೋಕ್ರಾನ್ ನಂತರದಲ್ಲಿ ಭಾರತದ ಉಪಖಂಡದಲ್ಲಿನ ಸ್ಥಿತಿ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರುವ ಅಮೆರಿಕ ಸಾಮ್ರಾಜ್ಯಶಾಹಿಗಳ ಮಧ್ಯ ಪ್ರವೇಶವನ್ನು ಬದಿಗೊತ್ತಬಹುದಾಗಿದೆ.

ಹಿಜಬುಲ್ ಮುಖಂಡರು ಗುಂಡು ಹಾರಿಸುವುದರ ವಿರಾಮ ಅಂತ್ಯ ಘೋಷಣೆ ಮಾಡುವಾಗ ಹೊಸ ಪ್ರಯತ್ನಗಳಿಗೆ ಸಿದ್ಧರಿರುವುದಾಗಿ ಪ್ರಕಟಿಸಿದ್ದಾರೆ. ಈಗ ವಾಜಪೇಯಿ ಸರಕಾರ ನಿರ್ಣಯ ಕೈಗೊಳ್ಳಬೇಕಿದೆ. ಕೇವಲ ಹಿಜಬುಲ್ ಜೊತೆ ಅಷ್ಟೇ ಅಲ್ಲ, ಚರ್ಚೆಗೆ ಸಿದ್ಧವಿರುವ ಎಲ್ಲಾ ಗುಂಪುಗಳೊಂದಿಗೆ ಅವರನ್ನು ಮಾತುಕತೆಗೆ ಬರುವಂತೆ ಮಾಡಬೇಕಾಗಿದೆ. ಈ ಕ್ರಮ ಕೈಗೊಳ್ಳಬೇಕಾದರೆ ಕೆಲವು ತಪ್ಪು ನಿಲುಮೆಗಳನ್ನು ಸರಕಾರ ಮತ್ತು ಬಿಜೆಪಿಯು ಕೈಬಿಡಬೇಕು. ಮತ್ತು ಪಾಕಿಸ್ತಾನ ಜೊತೆ ಮಾತುಕತೆಗೆ ತನ್ನ ಅತಿರೇಕದ ರಾಷ್ಟ್ರವಾದಕ್ಕೆ ಬಿಡಬೇಕು.

ಆರ್‌ಎಸ್‌ಎಸ್ ಸಂಘ ಪರಿವಾರದವರು ಕಾಶ್ಮೀರಿ ಕಗ್ಗೊಲೆಗಳನ್ನು ಮುಂದೊಡ್ಡಿ ಅಲ್ಪಸಂಖ್ಯಾತರ ಮೇಲೆ ಧಾಳಿ ಮಾಡುವಾಗ, ಬಿಜೆಪಿಯು ಶಾಂತಿ ಚರ್ಚೆಗಳ ಬಗ್ಗೆ ಗಂಭೀರವಾಗಿದ್ದೇವೆ ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ಸೂರತ್ ಮತ್ತು ಅಹಮದಾಬಾದ್‌ಗಳಲ್ಲಿ ಮುಸ್ಲಿಂ ಜನಾಂಗದ ಮೇಲೆ ವಿಶ್ವ ಹಿಂದೂ ಪರಿಷತ್, ಭಜರಂಗದಳಗಳ ದಾಳಿಗಳನ್ನು ಬಿಜೆಪಿ ಅಥವಾ ಗುಜರಾತ್ ಸರಕಾರ ಖಂಡಿಸಲೇ ಇಲ್ಲ.

ಆಶಾಗೋಪುರಗಳು ಎದ್ದು, ಕೂಡಲೇ ಕುಸಿದುಬಿದ್ದ ಸ್ಥಿತಿಯಲ್ಲಿರುವ ಕಾಶ್ಮೀರಿ ಜನತೆಯು ಭಾರತದ ಆಳ್ವಿಕೆಯನ್ನು ಕೇವಲ ಅಲ್ಲಿ ನೆಲೆಸಿದ ಭದ್ರತಾ ಪಡೆಗಳಿಂದ ಅನುಭವಿಸುವಂತೆ ಮಾಡುವುದಲ್ಲ - ಬದಲಾಗಿ ಜಮ್ಮು ಕಾಶ್ಮೀರದಲ್ಲಿ ಹೆಚ್ಚಿನ ಸ್ವಾಯತ್ತತೆಯನ್ನು ರಾಜಕೀಯ ಪ್ರಕ್ರಿಯೆ ಮೂಲಕ ಪುನಃ ನಿರ್ಮಿಸಬೇಕೆಂಬುದು ಪ್ರಜಾಸತ್ತಾತ್ಮಕ, ಜಾತ್ಯಾತೀತಯ ಬಯಕೆ ಆಗಿದೆ. ಈ ಪ್ರಕ್ರಿಯೆಯಲ್ಲಿ ಕಾಶ್ಮೀರ,ಜಮ್ಮು, ಲಡಕ್ ಪ್ರದೇಶಗಳನ್ನು ಮೂರು ಭಾಗಗಳಾಗಿ ಒಡೆಯುವ ಅಮೆರಿಕಾದ ಆಟ ನಡೆಯದಂತೆ ಗಮನ ನೀಡುವುದು ಅಗತ್ಯವಾಗಿದೆ.



ಕ್ಲಿಂಟನ್ ಹೇಳಿಕೆಗೆ ಖಂಡನೆ

ಸೆಪ್ಟೆಂಬರ್‌ನಲ್ಲಿ ಪ್ಯಾಲೆಸ್ಟೀನ್ ದೇಶ ಘೋಷಣೆ

ಅಧ್ಯಕ್ಷ ಕ್ಲಿಂಟನ್‌ರ ಮಧ್ಯಸ್ಥಿಕೆಯಲ್ಲಿ ಪ್ಯಾಲೆಸ್ಟೀನ್ ಅಧ್ಯಕ್ಷ ಯಾಸರ್ ಅರಾಫತ್ ಮತ್ತು ಇಸ್ರೇಲಿ ಪ್ರಧಾನಿ ಬಾರಾಕ್ ನಡುವೆ ಕ್ಯಾಂಪ್-ಡೆವಿಡ್ ನಲ್ಲಿ ನಡೆದ ಮಾತುಕತೆ ಮುರಿದುಬಿದ್ದಿದೆ. ಸೆಪ್ಟೆಂಬರ್ 13 ರ ಒಳಗೆ ಪ್ಯಾಲೆಸ್ಟೀನ್ ಸ್ವಾತಂತ್ರ್ಯದ ಬಗ್ಗೆ ಸಹಿ ಹಾಕಬೇಕಾಗಿದ್ದ ಅಂತಿಮ ಒಪ್ಪಂದ ಸಾಧ್ಯವಾಗಿಲ್ಲ. ಅಧ್ಯಕ್ಷ ಯಾಸೆರ್ ಅರಾಫತ್, ಮಾತುಕತೆ ಮುರಿದು ಬಿದ್ದಿರುವುದರಿಂದ, ಸೆಪ್ಟೆಂಬರ್ 13 ರಂದು ಸ್ವತಂತ್ರ ಪ್ಯಾಲೆಸ್ಟೀನ್ ದೇಶದ ಘೋಷಣೆಯನ್ನು ಏಕಪಕ್ಷೀಯವಾಗಿ ಘೋಷಿಸುವುದಾಗಿ ಹೇಳಿದ್ದಾರೆ. ಪ್ಯಾಲೆಸ್ಟೀನ್ ಜನತೆ 50 ವರ್ಷಗಳಿಂದ ಸ್ವಾತಂತ್ರ್ಯದ ಕನಸು ಕಂಡಿದ್ದಾರೆ, ಕಾದಿದ್ದಾರೆ. ಇನ್ನೂ ಕಾಯಲು ಸಾಧ್ಯವಿಲ್ಲ ಎಂದು ಅರಾಫತ್ ಖಾರವಾಗಿ ಹೇಳಿದ್ದಾರೆ.

ಯಾಸೆರ್ ಅರಾಫತ್‌ರ ಸ್ವಾತಂತ್ರ್ಯದ ಘೋಷಣೆ ಬಗ್ಗೆ ಪ್ರತಿಕ್ರಿಯಿಸುತ್ತಾ ಅಧ್ಯಕ್ಷ ಕ್ಲಿಂಟನ್ ನೀಡಿದ ಹೇಳಿಕೆ ಪೂರ್ಣವಾಗಿ ಇಸ್ರೇಲ್ ಪರವಾಗಿದ್ದು, ಪ್ಯಾಲೆಸ್ಟೀನ್ ಮಾತ್ರವಲ್ಲ ಎಲ್ಲಾ ಅರಬ್ ದೇಶಗಳ, ಕೆಲವು ಸ್ವತಂತ್ರ ಪಾಶ್ಚಿಮಾತ್ಯ ನಾಯಕರ ತೀವ್ರ ಟೀಕೆಗೆ ಒಳಗಾಗಿದೆ. ಪ್ಯಾಲೆಸ್ಟೀನ್ ಸ್ವಾತಂತ್ರ್ಯ ಘೋಷಣೆ ಮಾಡಿದರೆ, ಅಮೆರಿಕ ಪ್ಯಾಲೆಸ್ಟೀನ್‌ರ ಜತೆ ಸಂಬಂಧ ಇಟ್ಟುಕೊಳ್ಳಬೇಕೆ ಎಂದು ಪುನರ್ವಿಮರ್ಶೆ ಮಾಡಬೇಕಾಗುತ್ತದೆ. ಅಲ್ಲದೆ ಇಸ್ರೇಲ್‌ನ ರಾಜಧಾನಿ ಟೆಲ್ ಅವಿನ್‌ನಲ್ಲಿ ಈಗ ಇರುವ ಅಮೆರಿಕದ ರಾಯಭಾರ ಕಛೇರಿಯನ್ನು ಪಶ್ಚಿಮ ಜೆರುಸೆಲಂಗೆ ವರ್ಗಾಯಿಸುವುದು ಎಂದು ಹೇಳಿಕೆ ನೀಡಿ ಅಧ್ಯಕ್ಷ ಕ್ಲಿಂಟನ್ ತಮ್ಮ ಅಲಿಪ್ತ ಮಧ್ಯಸ್ತಿಕೆಯ ಪಾತ್ರಕ್ಕೆ ಕಲ್ಲು ಹಾಕಿಕೊಂಡಿದ್ದಾರೆ. ಸೆಪ್ಟೆಂಬರ್ 2000 ಒಳಗೆ ಅಂತಿಮ ನಿರ್ಧಾರ ಆಗಬೇಕೆಂದು ಇಸ್ರೇಲಿಗಳೇ ನಿರ್ಧರಿಸಿದ್ದು ಅದು ಸಾಧ್ಯವಾಗದಿದ್ದರೆ, ಅದಕ್ಕೆ ಇಸ್ರೇಲೇ ಹೊಣೆ ಎಂದು ಅರಬ್ ನಾಯಕರು, ಜನತೆ ಒಕ್ಕೊರಲಿನಿಂದ ಹೇಳಿದ್ದಾರೆ. ನಾರ್ವೆಯ ಒಸ್ಲೋದಲ್ಲಿ ಸಹಿ ಹಾಕಲಾದ ಮೊದಲು ಒಪ್ಪಂದದ ಪ್ರಕಾರ ಮೇ 1999 ರ ಒಳಗೆ ಅಂತಿಮ ನಿರ್ಧಾರ ಆಗಬೇಕಿತ್ತು. ಅದನ್ನು ಒಂದು ವರ್ಷಕ್ಕಿಂತಲೂ ಹೆಚ್ಚು ಮುಂದಕ್ಕೆ ಹಾಕಿದ್ದು, ಇಸ್ರೇಲ್ ಅಮೆರಿಕನ್ ಬೆಂಬಲದಿಂದ ಎಂದು ಎಲ್ಲರೂ ಎತ್ತಿ ತೋರಿಸಿದ್ದಾರೆ.

ಸಾರಾಸಗಟು ರಾಜಕೀಯ ಬ್ಲಾಕ್‌ಮೇಲ್

1991 ರಲ್ಲಿ ಇಸ್ರೇಲ್-ಪಾಲೆಸ್ಟೀನ್ ಮಾತುಕತೆ ಮಧ್ಯಸ್ಥಿಕೆ ಆರಂಭಿಸಿದ ಅಮೆರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ ಜೆಮ್ಸ್ ಬೇಕರ್ ಅವರು, ಪ್ರತಿನಿಧಿಸುವ ಜನತೆಯ ಬಹುಸಂಖ್ಯಾತ

ಮುರಿದು ಬಿದ್ದ ಪ್ಯಾಲೆಸ್ಟೀನ್-ಇಸ್ರೇಲ್ ಮಾತುಕತೆ

ಅಭಿಪ್ರಾಯದ ವಿರುದ್ಧ ಯಾವುದೇ ರಾಜಕೀಯ ನಾಯಕ ಒಪ್ಪಂದಕ್ಕೆ ಬರುವುದಿಲ್ಲ.ಆ ನಾಯಕರನ್ನು ಇಂತಹ ಒಪ್ಪಂದಕ್ಕೆ ಬರದಿರುವುದಕ್ಕೆ ಟೀಕಿಸುವುದರಲ್ಲಿ ಅರ್ಥವಿಲ್ಲ ಎಂದ ಮಾರ್ಮಿಕವಾಗಿ ಅಧ್ಯಕ್ಷ ಕ್ಲಿಂಟನ್ನರ ಟೀಕೆ ಸರಿಯಲ್ಲ ಎಂದು ವಾದಿಸಿದ್ದಾರೆ. ಪ್ಯಾಲೆಸ್ಟೀನ್ ನಾಯಕಿ ಡಾ|| ಅಶ್ರವಿ ಕ್ಲಿಂಟನ್‌ರ ಹೇಳಿಕೆಯನ್ನು 'ಸಾರಾಸಗಟು ರಾಜಕೀಯ ಬ್ಲಾಕ್‌ಮೇಲ್' ಎಂದು ಕರೆದಿದ್ದಾರೆ. ಹಲವಾರು ಅರಬ್ ಪತ್ರಿಕೆಗಳು ಮಾತುಕತೆ ವಿಫಲವಾಗುವುದಕ್ಕೆ ನೇರವಾಗಿ ಅಧ್ಯಕ್ಷ ಕ್ಲಿಂಟನ್‌ರನ್ನು ದೂರಿದ್ದಾರೆ. ಅವರು ನಿಜವಾದ ಮಧ್ಯಸ್ತಿಕೆ ಮಾಡದೆ, ಇಸ್ರೇಲ್ ನಿಲುವನ್ನು ಪೂರ್ಣವಾಗಿ ಬೆಂಬಲಿಸುತ್ತಾ, ಇಸ್ರೇಲಿ ಹಠಮಾರಿತನಕ್ಕೆ ಕಾರಣವಾಗಿದ್ದಾರೆ ಎಂದಿದ್ದಾರೆ.

ಅಧ್ಯಕ್ಷ ಕ್ಲಿಂಟನ್ ತಮ್ಮ ಅಧಿಕಾರ ಮುಗಿಯುವುದರ ಮೊದಲು ಪ್ಯಾಲೆಸ್ಟೀನ್ ಸಮಸ್ಯೆ ಪರಿಹಾರ ಮಾಡಿದ ಕೀರ್ತಿ ಪಡೆದುಕೊಳ್ಳಬೇಕು ಎಂದು ಕ್ಯಾಂಪ್ ಡೇವಿಡ್-2 ಎಂದು ಕರೆಯಲಾದ ಈ ಮಾತುಕತೆಗಳಿಗೆ ತರಾತುರಿಯಿಂದ ಒತ್ತಾಯಿಸಿದ್ದರು. ಆದರೆ ಅವರು ಮಾತುಕತೆಗಳಲ್ಲಿ ವಹಿಸಿದ ಪಾತ್ರ ಒಪ್ಪಂದಕ್ಕೆ ಬರುವುದರಲ್ಲಿ ಹೆಚ್ಚಿನ ತೊಡಕನ್ನು ಸೃಷ್ಟಿಸಿದೆ. 22 ವರ್ಷದ ಹಿಂದೆ (1978 ರಲ್ಲಿ) ಮೊದಲ ಕ್ಯಾಂಪ್ ಡೇವಿಡ್ ಮಾತುಕತೆಗಳು ನಡೆದಿದ್ದವು. 13 ದಿನಗಳ ಮಾತುಕತೆ ನಂತರ ಒಂದು ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಆಗಿನ ಒಪ್ಪಂದ ಈಜಿಪ್ಟ್ ಮತ್ತು ಇಸ್ರೇಲ್ ನಡುವೆ ಆಗಿತ್ತು. 1967 ರ ಯುದ್ಧದಲ್ಲಿ ಈಜಿಪ್ಟ್ ಕಳೆದುಕೊಂಡ ಭೂಮಿ ವಾಪಾಸು ಪಡೆದು ಶಾಂತಿ ಒಪ್ಪಂದಕ್ಕೆ ಸಹಿ ಮಾಡಿತ್ತು. ಪ್ಯಾಲೆಸ್ಟೀನ್ ಸಮಸ್ಯೆ ಪರಿಹಾರ ಆಗುವವರೆಗೆ ಯಾವುದೇ ಅರಬ್ ದೇಶ ಇಸ್ರೇಲ್‌ಗೆ ಮಾನ್ಯತೆ ಕೊಡುವುದಿಲ್ಲ. ಅವರ ಜತೆ ಮಾತುಕತೆ ಮಾಡುವುದಿಲ್ಲ ಎಂಬ ಅರಬ್ ಸಾಮಾನ್ಯ ನಿಲುವನ್ನು ಧಿಕ್ಕರಿಸಿ ಈಜಿಪ್ಟ್ ಈ ಒಪ್ಪಂದಕ್ಕೆ ಇಳಿದಿತ್ತು. ಆ ಮೂಲಕ ಅರಬ್ ಬಿಕ್ಕಟ್ಟನ್ನು ಮುರಿದಿತ್ತು. ಕ್ಯಾಂಪ್ ಡೇವಿಡ್ -1 ಒಪ್ಪಂದದ ಮೂಲಕ ಸಾಮ್ರಾಜ್ಯಶಾಹಿ ಇಸ್ರೇಲಿಗೆ ಕನಿಷ್ಟ ಅಂಶಿತ ಅರಬ್ ಮಾನ್ಯತೆ ಗಳಿಸುವಲ್ಲಿ, ಅರಬ್ ಬಿಕ್ಕಟ್ಟು ಮುರಿಯುವಲ್ಲಿ, ಆ ಮೂಲಕ ಪ್ಯಾಲೆಸ್ಟೀನ್ ಸಮಸ್ಯೆಗೆ ಪರಿಹಾರ ಮುಂದಕ್ಕೆ ಹಾಕುವಲ್ಲಿ ಯಶಸ್ವಿಯಾಗಿತ್ತು. ಕ್ಯಾಂಪ್ ಡೇವಿಡ್-2 ರಲ್ಲೂ ಸಾಮ್ರಾಜ್ಯಶಾಹಿ, ಇಸ್ರೇಲಿ-ಪರ ಒಪ್ಪಂದ ಸಾಧ್ಯವಾಗುತ್ತದೆ ಎಂದು ಅವರು ಭಾವಿಸಿದ್ದು ಅದು ಸಾಧ್ಯವಾಗಿಲ್ಲ.

ಪ್ಯಾಲೆಸ್ಟೀನ್ ಸಮಸ್ಯೆಯ ಚರಿತ್ರೆ

ಈ ಇಡೀ ಪ್ಯಾಲೆಸ್ಟೀನ್ ಸಮಸ್ಯೆ ಸೃಷ್ಟಿಸಿದ್ದು ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಶಾಹಿ ಎಂದು ಇಲ್ಲಿ ನೆನಪಿಸಿಕೊಳ್ಳುವುದು ಸೂಕ್ತ. ಮೊದಲ ಮಹಾಯುದ್ಧದಲ್ಲಿ ತುರ್ಕಿ ಪರಾಜಯದಿಂದ ಈ ಅರಬ್ ಪ್ರದೇಶಗಳು ಬ್ರಿಟಿಷ್, ಫ್ರೆಂಚ್ ನಿಯಂತ್ರಣಕ್ಕೆ ಬಂದಿದ್ದವು. ಎರಡನೇ ಮಹಾಯುದ್ಧದ ನಂತರ ಈ ಪ್ರದೇಶಗಳಿಗೆ ಸ್ವಾತಂತ್ರ್ಯ ಕೊಡಬೇಕಾದಾಗ ಬ್ರಿಟಿಷ್ ತಮ್ಮ ಎಂದಿನ ಒಡೆದು ಆಳುವ ಕುತಂತ್ರ(ಭಾರತದಲ್ಲಿ ಮಾಡಿದಂತೆ)ಬಳಸಿದರು. ಜ್ಯೂ ದೇಶವನ್ನು ಸೃಷ್ಟಿಸಿ ಪ್ಯಾಲೆಸ್ಟೀನ್‌ನ್ನು ಇಬ್ಭಾಗ ಮಾಡುವ ಹಾಗೂ ಇಡೀ ಪ್ರದೇಶದಲ್ಲಿ ಸಮಸ್ಯೆ ಸೃಷ್ಟಿಸಿ ಆ ಪ್ರದೇಶದ ಮೇಲೆ ಹಿಡಿತ ಸಾಧಿಸುವ ಬ್ರಿಟಿಷ್ - ಫ್ರೆಂಚ್ ಕುತಂತ್ರದ ಫಲವೇ ಪ್ಯಾಲೆಸ್ಟೀನ್ ಸಮಸ್ಯೆ.

1948 ರಲ್ಲಿ ವಿಶ್ವಸಂಸ್ಥೆಯ ನಿರ್ಣಯವೊಂದರ ಮೂಲಕ ಪ್ಯಾಲೆಸ್ಟೀನ್‌ನ್ನು ಇಬ್ಭಾಗ ಮಾಡಿ ಇಸ್ರೇಲನ್ನು ಸೃಷ್ಟಿಸಲಾಯಿತು. ಸಾಮ್ರಾಜ್ಯಶಾಹಿಗಳ ಮತ್ತು ಅದರ ಜ್ಯೂ ಬೆಂಬಲಿಗರು(ಇಸ್ರೇಲಿಗಳು) ವಿಶ್ವಸಂಸ್ಥೆಯ ಇಬ್ಭಾಗ ಮಾಡುವ ನಿರ್ಣಯವನ್ನು ಒಪ್ಪಿದರು. ಆದರೆ ಅದು ನಿರ್ಧರಿಸಿದ ಗಡಿಯನ್ನು ಮಾನ್ಯತೆ ಮಾಡಿಲ್ಲ. ಇದು ಅರಬ್-ಇಸ್ರೇಲಿ ಸತತ ಘರ್ಷಣೆಗೆ ಕಾರಣವಾಗಿದೆ. 1948 ರ ಮತ್ತು 1967 ರಲ್ಲಿ ಮತ್ತು ಆಮೇಲೆ ನಡೆದ ಹಲವು ಯುದ್ಧಗಳಲ್ಲಿ ಇಸ್ರೇಲ್ ತನ್ನ ಗಡಿ ವಿಸ್ತರಿಸುತ್ತಾ ಹೋಗಿದೆ, ಅಮೆರಿಕನ್ ಮತ್ತು ಇತರ ಸಾಮ್ರಾಜ್ಯಶಾಹಿಗಳ ಕುಮ್ಮಕ್ಕಿನಿಂದ ಪ್ಯಾಲೆಸ್ಟೇನರು ಇತರ ಅರಬ್ ದೇಶಗಳಲ್ಲಿ ನಿರಾಶ್ರಿತರಾಗಿ ವಾಸಿಸುತ್ತಿದ್ದಾರೆ. ಸ್ವತಂತ್ರ ಪ್ಯಾಲೆಸ್ಟೀನ್‌ಗೆ ಹೋರಾಡಲು ಯಾಸೆರ್ ಅರಾಫತ್ ಪ್ಯಾಲೆಸ್ಟೀನ್ ವಿಮೋಚನೆಗೆ ಸಂಘಟನೆ (PLO) ಸ್ಥಾಪಿಸಿದರು.

ನೆನೆಗುದಿಗೆ ಬಿದ್ದಿರುವ ಪ್ರಮುಖ ಸಮಸ್ಯೆಗಳು

1991 ರಲ್ಲಿ ಆದ ಒಸ್ಲೋ ಒಪ್ಪಂದದಲ್ಲಿ ಪ್ಯಾಲೆಸ್ಟೀನ್ನರು ಎರಡು ಪ್ರಮುಖ ರಿಯಾಯಿತಿ ನೀಡಿದ್ದಾರೆ. 1948 ರ ವಿಶ್ವಸಂಸ್ಥೆಯ ನಿರ್ಣಯ ನಿರ್ಧರಿಸಿದ ಗಡಿ ಬದಲು, 1967 ರಲ್ಲಿ ಇದ್ದ ಗಡಿಗೆ ಒಪ್ಪಿತು(ಇದರಿಂದ 78% ಭೂಮಿಯನ್ನು ಇಸ್ರೇಲಿಗೆ ದಾನ ಮಾಡಿದಂತಾಗಿದೆ). ಇದಲ್ಲದೆ ಸ್ವತಂತ್ರ ಪ್ಯಾಲೆಸ್ಟೀನ್ ರಚಿತವಾಗುವ ಮೊದಲೇ ಇಸ್ರೇಲನ್ನು ಮಾನ್ಯ ಮಾಡಿದೆ. ಇವೆರಡು ಪ್ರಮುಖ ರಿಯಾಯಿತಿ ನಂತರವೂ ಪ್ಯಾಲೆಸ್ಟೀನ್‌ರಿಗೆ ದಕ್ಕಿದ್ದು ಬರಿ ಮಾತುಕತೆಗಳು. 1967 ರ ಗಡಿ ಮೀರಿ ಇಸ್ರೇಲಿ ಜ್ಯೂಗಳು ಪ್ಯಾಲೆಸ್ಟೀನ್ ಪ್ರದೇಶಗಳಲ್ಲಿ ನೆಲೆ ಸ್ಥಾಪಿಸಿದ್ದಾರೆ. ಅದನ್ನು ತೆರವು ಮಾಡುವುದು ಪ್ರಮುಖ ಪ್ಯಾಲೆಸ್ಟೀನ್ ಬೇಡಿಕೆ. ಇದಲ್ಲದೆ ಪೂರ್ವ ಜೆರುಸಲಂನ್ನು ಪ್ಯಾಲೆಸ್ಟೀನ್ ರಾಜಧಾನಿಯಾಗಿ ಬಿಟ್ಟುಕೊಡುವುದು ಇನ್ನೊಂದು ಪ್ರಮುಖ ಬೇಡಿಕೆ. ಇವೆರಡು ಬೇಡಿಕೆಗಳು ಪೂರೈಸದೆ, ಅರಬ್ ದೇಶಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ನಿರಾಶ್ರಿತರು ವಾಪಸಾಗಿ ನೆಲೆಸುವುದು ಎಲ್ಲಿ? ಈ ನ್ಯಾಯಯುತ ಬೇಡಿಕೆಗಳಿಗೆ ಒಪ್ಪುವುದಕ್ಕೆ ಇಸ್ರೇಲ್ ಮತ್ತು ಅದರ ಸಾಮ್ರಾಜ್ಯಶಾಹಿ ಬೆಂಬಲಿಗರು ಮೀನಮೇಷ ಎಣಿಸುತ್ತಿದ್ದಾರೆ. ಒಸ್ಲೊ ಮಾತುಕತೆಯಲ್ಲಿ ಒಪ್ಪಿತ ನೀತಿಗಳ(1967 ರ ಗಡಿ, ಪೂರ್ವಜೆರುಸಲಂ ರಾಜಧಾನಿ) ಜಾರಿಗೆ ಹಿಂದೇಟು ಹಾಕುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಕ್ಯಾಂಪ್-ಡೇವಿಡ್ - 2 ವಿಫಲ ಮಾತುಕತೆ ಬಹಳ ದುರದೃಷ್ಟಕರ. ಅಂತಿಮ ಒಪ್ಪಂದ ಆಗದೆ ಇರುವುದು - ಈ ಪ್ರದೇಶದಲ್ಲಿ ಪುನಃ ಯುದ್ಧ, ಹಿಂಸಾಚಾರಕ್ಕೆ ಆಹ್ವಾನ. ಅಧ್ಯಕ್ಷ ಕ್ಲಿಂಟನ್ ಬರಿಯ ಅಮೆರಿಕನ್ ಜ್ಯೂಗಳ ಓಟಿಗಾಗಿ(ಮುಂದಿನ ಅಧ್ಯಕ್ಷೀಯ ಚುನಾವಣೆಯಲ್ಲಿ) ಈ ಕ್ಯಾಂಪ್ ಡೇವಿಡ್-2 ಮಾತುಕತೆಗೆ ಒತ್ತಾಯಿಸಿದರು ಎಂಬ ಪುಕಾರು, ಅಮೆರಿಕದ ಯಾವುದೇ ಪಾತ್ರಕ್ಕೆ ಭಾರಿ ತೊಡಕಾಗಬಹುದು. ಪ್ಯಾಲೆಸ್ಟೀನ್ ಜನತೆಯ ಆಶೋತ್ತರಗಳನ್ನು ಈಡೇರಿಸುವುದು, ಮಧ್ಯ ಏಶ್ಯಾದಲ್ಲಿ ಶಾಂತಿ ಇನ್ನೆಷ್ಟು ದೂರ?

ಸ್ವತಂತ್ರ ಪ್ಯಾಲೆಸ್ಟೀನ್‌ಗೆ ಸಿಪಿಐ(ಎಂ) ಬೆಂಬಲ

ಜುಲೈ 28-29 ರಂದು ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಅಂಗೀಕರಿಸಿದ ರಾಜಕೀಯ ವರದಿಯಲ್ಲಿ ಸ್ವತಂತ್ರ ಪ್ಯಾಲೆಸ್ಟೀನ್‌ಗೆ ಬೆಂಬಲ ವ್ಯಕ್ತಪಡಿಸಿದೆ. ಪ್ಯಾಲೆಸ್ಟೀನ್ ಜನತೆಯ ನ್ಯಾಯಯುತ ಬೇಡಿಕೆಗಳು ಹಾಗೂ ಸ್ವತಂತ್ರ ದೇಶದ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ಇಸ್ರೇಲ್ ಅಡ್ಡಗಾಲು ಹಾಕುತ್ತಿರುವುದನ್ನು ಆತಂಕದಿಂದ ಗಮನಿಸಿದೆ. ಅಮೆರಿಕದ ಮಧ್ಯಸ್ಥಿಕೆಯಲ್ಲಿ ನಡೆದ ಮಾತುಕತೆಗಳು ದಶಕಗಳಿಂದ ನೆನೆಗುದಿಗೆ ಬಿದ್ದಿರುವ ವಿವಾದವನ್ನು ಪರಿಹರಿಸುವಲ್ಲಿ ವಿಫಲವಾಗಿವೆ. ಮುಂದಿನ ತಿಂಗಳು ಸ್ವತಂತ್ರ ದೇಶ ಘೋಷಿಸಿದಂತೆ ಯಾಸೆರ್ ಅರಾಫತ್‌ಗೆ ಅಧ್ಯಕ್ಷ ಕ್ಲಿಂಟನ್ ಎಚ್ಚರಿಕೆ ನೀಡುತ್ತಾ, ಇಸ್ರೇಲಿ ಪರ ಪೂರ್ಣವಾಗಿ ವಾಲಿದ್ದಾರೆ. ಸಿಪಿಐ(ಎಂ) ಕೇಂದ್ರ ಸಮಿತಿ ಸ್ವತಂತ್ರ ಪ್ಯಾಲೆಸ್ಟೀನ್ ಮತ್ತು ಪೂರ್ವ ಜೆರುಸಲೆಂನ್ನು ರಾಜಧಾನಿಯಾಗಿ ಹೊಂದುವ ಪ್ಯಾಲೆಸ್ಟೀನ್ ವಿಮೋಚನಾ ಸಂಘಟನೆಯ ನಿಲುಮೆಯನ್ನು ಬೆಂಬಲಿಸಿದೆ.

ಮಂಗೋಲಿಯದಲ್ಲಿ ಜಾಗತೀಕರಣ ಶಕ್ತಿಗಳಿಗೆ ಪರಾಜಯ




ಫ್ರಾನ್ಸಿನ ರೈತರು ಜಾಗತೀಕರಣದ ವಿರುದ್ಧ ತಮ್ಮ ದನಿ ಎತ್ತಿದ್ದು ಕೇಳಿದ್ದೀರಿ. ಈ ವಾರ ಜಗತ್ತಿನ ಹೆಚ್ಚಿನ ಜನ ಕೇಳೇ ಇರದ, ಮೂಲೆಯ ದೇಶದ ಕುರುಬರು, ಲಂಬಾಣಿಗಳು ಜಾಗತೀಕರಣದ ಶಕ್ತಿಗಳಿಗೆ ಮುಟ್ಟಿಕೊಂಡು ನೋಡುವಂತೆ ಪರಾಜಯದ ಏಟು ಕೊಟ್ಟಿದ್ದಾರೆ. ಚೀನಾದ ಉತ್ತರಕ್ಕೂ, ಸೋವಿಯತ್ ಒಕ್ಕೂಟದ ದಕ್ಷಿಣಕ್ಕೂ ಇರುವ ಪುಟ್ಟ ದೇಶ ಮಂಗೋಲಿಯ. ಆ ದೇಶದ ಚುನಾವಣೆಗಳಲ್ಲಿ ಜನ-ವಿರೋಧಿ ಜಾಗತೀಕರಣದ ನೀತಿಯನ್ನು ಬದಲಾಯಿಸುವ ಭರವಸೆ ನೀಡಿದ ಪಕ್ಷ ಭಾರೀ ಬಹುಮತದಿಂದ ಅಧಿಕಾರಕ್ಕೆ ಬಂದಿದೆ. ಆ ಪಕ್ಷ ಮಂಗೋಲಿಯಾ ಪೀಪಲ್ಸ್ ರೆವಲ್ಯೂಶನರಿ ಪಾರ್ಟಿ (MPRP). ಈ ಪಕ್ಷ ಮಂಗೋಲಿಯಾದ ಮಹಾ ಹುರಾಲ್(ಪಾರ್ಲಿಮೆಂಟ್) ಗೆ ಜುಲೈನಲ್ಲಿ ನಡೆದ ಚುನಾವಣೆಗಳಲ್ಲಿ 76 ಸೀಟುಗಳಲ್ಲಿ 72 ಸೀಟುಗಳನ್ನು ಗಳಿಸಿ ಭಾರಿ ಬಹುಮತ ಗಳಿಸಿದೆ. ಕಳೆದ 5 ವರ್ಷಗಳಲ್ಲಿ ಜಾಗತೀಕರಣ-ಪರ ಜನ-ವಿರೋಧಿ ನೀತಿಗಳನ್ನು ಜನರ ಮೇಲೆ ಹೊರಿಸಿದ್ದ ರಾಜಕೀಯ ಶಕ್ತಿಗಳು ಭಾರಿ ಪರಾಭವ ಕಂಡಿವೆ.

1989 ರ ಮೊದಲು ಮಂಗೋಲಿಯಾ ಸಮಾಜವಾದಿ ದೇಶವಾಗಿತ್ತು. ಭಾರಿ ಅಭಿವೃದ್ಧಿ ಹೊಂದಿದ ದೇಶವಲ್ಲದಿದ್ದರೂ, ಬಡತನ ಕಣ್ಣಿಗೆ ಕಾಣದ ದೇಶವಾಗಿತ್ತು. ಪೂರ್ವಯುರೋಪಿನಲ್ಲಿ ಸಮಾಜವಾದದ ಅವನತಿಯ ಹಿನ್ನೆಲೆಯಲ್ಲಿ ಈ ದೇಶದಲ್ಲೂ, ಸಮಾಜವಾದಿ ವ್ಯವಸ್ಥೆ ಕುಸಿದು ಬಿದ್ದಿತ್ತು. ಅಂದಿನಿಂದ ಜನರ ಜೀವನಮಟ್ಟ ಕುಸಿಯುತ್ತಲೇ ಬಂದಿದೆ. ಬಡತನ ಕಾಣದೇ ಇದ್ದ ದೇಶದಲ್ಲಿ, 24ಲಕ್ಷ ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗ ಬಡತನದ ರೇಖೆಯ ಕೆಳಗೆ ತಳ್ಳಲ್ಪಟ್ಟಿದ್ದಾರೆ. ಆರ್ಥಿಕ-ಪೂರ್ತ ಕುಸಿದು ಬಿದ್ದಿದೆ. ಈ ವರ್ಷ ಮಂಗೋಲಿಯಾದ ಆರ್ಥಿಕ ಹಿಂದೆಂದೂ ಕಾಣದ ಪ್ರಪಾತಕೆ ಬಿದ್ದಿದೆ. ಹದಿನೆಂಟರಲ್ಲಿ ಆರು ಪ್ರಾಂತ್ಯಗಳಲ್ಲಿ ಭಾರಿ ಚಳಿಯಿಂದಾಗಿ ಮೇವು ಕರಟಿಹೋಗಿದೆ. 20 ಲಕ್ಷ ಪ್ರಾಣಿಗಳು ಮೇವಿಲ್ಲದೆ ಸತ್ತವು. ಎಂಟು ಲಕ್ಷ ಪಶುಪಾಲನೆ ಮೇಲೆ ಅವಲಂಬಿಸಿದವರು ನಿರ್ಗತಿಕರಾದರು. ಪ್ರಾಕೃತಿಕ ವಿಕೋಪಕ್ಕೆ ಗುರಿಯಾದ ಜನರಿಗೆ ಯಾವುದೇ ರೀತಿಯ ನೆರವು ಲಭ್ಯವಿರಲಿಲ್ಲ.

ಆದರೆ ಇಂತಹ ಪ್ರಾಕೃತಿಕ ವಿಕೋಪ ಕಂಡು ಬಂದಿರುವುದು ಇದು ಮೊದಲ ಬಾರಿಯಲ್ಲ. ಆದರೆ 1989 ರ ಮೊದಲಿನ ವ್ಯವಸ್ಥೆಯಲ್ಲಿ ಪಶುಪಾಲನೆ ಮಾಡುವವರ ಮತ್ತು ಪಶುಗಳು ಸಾಮೂಹಿಕ ಫಾರ್ಮುಗಳಲ್ಲಿ ಸಂಘಟಿತರಾಗುತ್ತಿದ್ದರು. ಇಂತಹ ಪ್ರಕೋಪಗಳು ಆದಾಗ, ಸಾಮೂಹಿಕ ಫಾರ್ಮು ಸಂತ್ರಸ್ತರನ್ನು ನೋಡಿಕೊಳ್ಳುತ್ತಿತ್ತು. ಆದರೆ ಐ.ಎಂ.ಎಫ್.-ವಿಶ್ವಬ್ಯಾಂಕ್ ಪ್ರೇರಿತ ನೀತಿಗಳ ಭರದಿಂದ ಇವೆಲ್ಲವನ್ನು 1989 ರ ನಂತರ ನಾಶ ಮಾಡಲಾಯಿತು. ಇದರಿಂದ ಜನರ ಜೀವನಮಟ್ಟ ಕುಸಿದದ್ದು ಮಾತ್ರವಲ್ಲ, ಪ್ರಾಕೃತಿಕ ಪ್ರಕೋಪವನ್ನು ಎದುರಿಸುವ ಸಾಮರ್ಥ್ಯವನ್ನು ಈ ಸಮಾಜ ಕಳೆದುಕೊಂಡಿದೆ. ಈ ರೀತಿ ಸಂತ್ರಸ್ತ ಜನರ ಮುಂದೆ, ನಂಬರಿನ್ ವಭಯರ್ ನಾಯಕತ್ವದ MPRP ಪಕ್ಷ ಖಾಸಗೀಕರಣ, ಉದಾರೀಕರಣ, ಜಾಗತೀಕರಣದ ನೀತಿಗಳನ್ನು ಹಿಂದಕ್ಕೆ ಸರಿಸುವ ಘೋಷಣೆ ಮಾಡಿದಾಗ ಜನ ಅದರ ಬೆಂಬಲಕ್ಕೆ ಎದ್ದು ನಿಂತರು. ಉಚಿತ ಶಿಕ್ಷಣ, ಉದ್ಯೋಗ ಸೃಷ್ಟಿ, ಖಾಸಗೀಕರಣಕ್ಕೆ ತಡೆ ಇತ್ಯಾದಿ ಕಾರ್ಯಕ್ರಮ ಒಡ್ಡಿದ MPRP ಪಕ್ಷದ ಬೆಂಬಲಕ್ಕೆ ಜನ ಟೊಂಕಕಟ್ಟಿ ನಿಂತರು.

ಜಾಗತೀಕರಣಕ್ಕೆ ಪ್ರತಿರೋಧ ಜಗತ್ತಿನ ಎಲ್ಲಾ ಮೂಲೆಗಳಿಂದ ಬರುತ್ತಿದೆ. ಆದರೆ ಮಂಗೋಲಿಯಾದಂತಹ ಅಜ್ಞಾತ ಜಾಗದಿಂದ ಎದ್ದಿರುವ ಪ್ರತಿರೋಧ ಜಾಗತೀಕರಣದ ವಿರುದ್ಧ ಎಷ್ಟು ಪ್ರಬಲ ಗಾಳಿ ಬೀಸುತ್ತಿದೆ ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿದೆ.

ಆಲಿ ಸರ್ದಾರ್ ಜಫ್ರಿ ನಿಧನ



ಆಗಸ್ಟ್ 1, 2000. ಈ ದೇಶದ ಪ್ರಗತಿಪರ ಚಿಂತಕರಿಗೆ, ಜನಪರ ಕಾಳಜಿಯ ಮನಸ್ಸುಗಳಿಗೆ ಅತ್ಯಂತ ನೋವಿನ ದಿನ. ಜನಸಾಮಾನ್ಯರ ಪರ, ಶೋಷಿತರ ಪರ ನಿರಂತರ ತಮ್ಮ ಬರಹಗಳಲ್ಲಿ, ಕಾವ್ಯಗಳಲ್ಲಿ ಪ್ರೀತಿಯ ಸೆಲೆ ಹರಿಸುತ್ತಿದ್ದ, ಅವರ ಮೌನಗಳಿಗೆ ತಮ್ಮ ಬರಹಗಳ ಮೂಲಕ ಮಾತು ನೀಡುತ್ತಿದ್ದ ನಮ್ಮೆಲ್ಲರ ಪ್ರೀತಿಯ ಸಂಗಾತಿ ಆಲಿ ಸರ್ದಾರ್ ಜಫ್ರಿ ನಮ್ಮನ್ನಗಲಿದ ದಿನ.

ಈ ದೇಶದ ಪ್ರಗತಿಪರ ಬರಹಗಾರರ ಸಂಘಟನೆಯ ಬೀಜ ಬಿತ್ತಿ ಅದರ ಫಲವನ್ನು ಜನರೆಡೆಗೆ ತಲುಪಿಸಿದ ಜಫ್ರಿ ಜನರ ನೋವುಗಳನ್ನೇ ಧ್ವನಿಯಾಗಿಸಿದವರು. ತಮ್ಮ ಕಾವ್ಯಗಳಲ್ಲಿ ಸದಾ ಪ್ರೀತಿಯ ಭ್ರಾತೃತ್ವದ ಸಿಂಚನ ಹರಿಸುತ್ತಿದ್ದ ಸದಾ ಹಸನ್ಮುಖಿ ಜಫ್ರಿ ರಹಿತ ಜಗತ್ತು ಇಂದು ಬಡವಾಗಿದೆ.

ಸಮ ಸಮಾಜದ ನಿರ್ಮಾಣಕ್ಕೆ ಸದಾ ತವಕಿಸುತ್ತಿದ್ದ ಕ್ರಾಂತಿಯ ದಟ್ಟ ಕನಸುಗಳ ಒಡೆಯ ಸರ್ದಾರ್ ಜಫ್ರಿ ಜ್ಞಾನಪೀಠಕ್ಕಿಂತಲೂ ಜನರ ಪ್ರೀತಿಯನ್ನೇ ಹಂಬಲಿಸಿದವರು. ಅದನ್ನು ಅವರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಪಡೆದುಕೊಂಡರು ಕೂಡ. ಕವಿಗೋಷ್ಠಿಗಳಲ್ಲಿ ನನ್ನ ಕವಿತೆ ಕೇಳಿದ ಜನತೆಯ ಹರ್ಷೋದ್ಗಾರ, ಚಪ್ಪಾಳೆ ನನಗೆ ಜ್ಞಾನಪೀಠಕ್ಕಿಂತಲೂ ಮಿಗಿಲು ಎಂದು ನಂಬಿದವರು ಅವರು.

ಕೆಂಬಾವುಟದಡಿಯಲ್ಲಿ ನಡೆದ ಹಲವು ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಅವರು ಆ ಸಮಯದಲ್ಲೇ ಎಷ್ಟೋ ದಿನ ಹೊಟ್ಟೆಗೆ ತುತ್ತು ಕೂಳು ಇಲ್ಲದೆ ಕಳೆದವರು. ಕೊನೆಯವರೆಗೂ ತಾವು ನಂಬಿದ ಸಿದ್ಧಾಂತಕ್ಕೆ, ಶಿಸ್ತಿಗೆ ಬೆಲೆ ಕೊಟ್ಟರು.

ತಮ್ಮ ಪ್ರೀತಿಯ ಕವಿ ಆಲಿ ಸರ್ದಾರ್ ಜಫ್ರಿ ಬಗ್ಗೆ ಖ್ಯಾತ ಅಂಕಣಕಾರ ಖುಷ್ವಂತ್ ಸಿಂಗ್ ಹೀಗೆ ಬರೆಯುತ್ತಾರೆ - ಅಲಿ ಸರ್ದಾರ್ ಜಫ್ರಿಗೆ ಈ ಜಗತ್ತು ಎಷ್ಟೆಲ್ಲಾ ಪ್ರೀತಿ ನೀಡಿತ್ತೋ, ಆತ ಅದನ್ನೆಲ್ಲಾ ಅಷ್ಟೇ ಪ್ರಮಾಣದಲ್ಲಿ ಹಿಂತಿರುಗಿಸಿದ

ಭಾರತದ ಸ್ವಾತಂತ್ರ್ಯದ ಹೋರಾಟದ ಸಮಯದಲ್ಲಿ ನಡೆದ ಕೋಮುಗಲಭೆಗಳಲ್ಲಿ ಸರ್ದಾರ್ ಜಫ್ರಿ ತಮ್ಮ ಮಕ್ಕಳನ್ನು ಕಳೆದುಕೊಂಡಾಗಲೂ ಸಹನೆಗೆಡಲಿಲ್ಲ. ಬದಲಾಗಿ ಪ್ರೀತಿಯ ಪಕಳೆಗಳನ್ನು ಉದುರಿಸಿದವರು. ಭಾರತ ವಿಭಜನೆಗೊಳ್ಳುವುದನ್ನು ಬಲವಾಗಿ ವಿರೋಧಿಸಿದ ಜಫ್ರಿ ಎರಡು ರಾಷ್ಟ್ರ ಸಿದ್ಧಾಂತಕ್ಕೆ ಎಂದು ಒಪ್ಪಿಗೆ ನೀಡಿರಲಿಲ್ಲ.

ಜಫ್ರಿಯನ್ನು ಕಳೆದುಕೊಂಡು ಈ ದೇಶದ ಪ್ರಗತಿಪರ ಜನಪರ ಚಳುವಳಿ ಬಡವಾಗಿದೆ. ಜಗತ್ತು ಇಂದು ಸಾಮ್ರಾಜ್ಯವಾದದ ಭೀತಿಯಿಂದ ಕಾಡುತ್ತಿದೆ. ಭಾರತದಲ್ಲೂ ಸಾಮ್ರಾಜ್ಯವಾದ, ಕೋಮುವಾದದ ವಿರುದ್ಧ ತೀವ್ರತರದ ಹೋರಾಟಗಳು ಎದ್ದು ಬರಲಾರಂಭಿಸಿವೆ. ಇಂತಹ ಸಮಯದಲ್ಲಿ ಸಾಮ್ರಾಜ್ಯವಾದದ, ಕೋಮುವಾದದ ವಿರುದ್ಧ ದಶಕಗಳ ಕಾಲ ಹೋರಾಟ ನಡೆಸಿದ ಜನಪರ ಸಾಹಿತಿ ಸರ್ದಾರ್ ಜಫ್ರಿ ಅಗಲಿಕೆಯ ನೋವು. ಆದರೂ ಅವರ ಕನಸುಗಳೇನೂ ಸಾಯಲಾರವು. ಸಾಮ್ರಾಜ್ಯವಾದದ ವಿರುದ್ಧ ಹೋರಾಟ ಇನ್ನಷ್ಟು ಪ್ರಖರತೆಯತ್ತ ಸಾಗುತ್ತಿದೆ. ಜಫ್ರಿ ಕಂಡ ಕನಸು ನನಸಾಗುತ್ತವೆ.

ಪರಿಚಯ: ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ಬಲರಾಮ್‌ಪುರ ಎಂಬಲ್ಲಿ ಜನಿಸಿದ ಸರ್ದಾರ್ ತನ್ನ ವಿದ್ಯಾರ್ಥಿ ದೆಸೆಯಲ್ಲೇ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡವರು. 1936 ರ ವೇಳೆ ಆಗಲೇ ವಿದ್ಯಾರ್ಥಿ ಚಳುವಳಿಯ ಪ್ರಬಲ ನಾಯಕರೆನಿಸಿಕೊಂಡಾಗ ಆಲಿಘಡ ವಿಶ್ವವಿದ್ಯಾಲಯದಿಂದ ಉಚ್ಚಾಟನೆಗೊಂಡಿದ್ದ ಕಾರಣ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಟ, ನಂತರ ಲಕ್ನೋ ವಿ.ವಿ. ಸೇರಿ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತಗೊಂಡ ಜಫ್ರಿ ಎಡ ಚಳುವಳಿಯತ್ತ ಆಕರ್ಷಿತರಾದರು. ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಉರ್ದು ಮುಖವಾಣಿ ಖ್ವಾಮಿ ಜಂಗ್ ನ ಸಂಪಾದಕೀಯ ಮಂಡಳಿಯಲ್ಲಿ ಸೇವೆ ಸಲ್ಲಿಸಿದರು. ಪ್ರಗತಿಪರ ಬರಹಗಾರರ ಸಂಘಟನೆ (PWA) ಯ ಸ್ಥಾಪನೆಯಲ್ಲಿ ಮಹತ್ತರ ಪಾತ್ರ ನಿರ್ವಹಿಸಿದ ಅವರು ದಶಕಗಳ ಕಾಲ ಆ ಚಳುವಳಿಗೆ ನೇತೃತ್ವ ನೀಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಬಂಧನಕ್ಕೊಳಗಾದ ಜಫ್ರಿ ಸ್ವತಂತ್ರ ಭಾರತದಲ್ಲಿ ನಡೆದ ಚಾರಿತ್ರಿಕ ತೆಲಂಗಾಣ ಸಶಸ್ತ್ರ ಹೋರಾಟದ ಸಮಯದಲ್ಲೂ ಬಂಧನಕ್ಕೊಳಗಾದರು.

ಜಫ್ರಿಯವರು ಕೇವಲ ಕವಿತೆಗಾಗಿ ಕವಿತೆಯಲ್ಲ, ಬರಹಕ್ಕಾಗಿ ಬರಹವಲ್ಲ ಜನರ ನೋವಿನೊಂದಿಗೆ, ನಲಿವಿನೊಂದಿಗೆ ಸದಾ ತುಡಿಯುತ್ತಿದ್ದವು ಅವರ ಕಾವ್ಯಗಳು, ಬರಹಗಳು. ಜನರೊಂದಿಗೆ ಒಂದಾಗಿರುತ್ತಿದ್ದವು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಅವರು ಪ್ರಮುಖ ಉರ್ದು ಸಂಗಾತಿಗಳೊಂದಿಗೆ ಗುರುತಿಸಿಕೊಂಡಿದ್ದರು. ಸೃಜನಶೀಲ ಉರ್ದು ಬರಹಗಳಾದ ಏಷ್ಯಾ ಜಾಗ್ ಉಠಾ ನಯೀ ದುನಿಯಾ ಕೋಂ ಸಲಾವ್ ಪತ್ಥರ್ ಕೀ ದೀವಾರ್ ಸರಹದ್ ಮೊದಲಾದವು ಉರ್ದು ಸಾಹಿತ್ಯದಲ್ಲಿ ಪ್ರಗತಿಪರತೆ ಹೊಸ ಅಲೆಯನ್ನೇ ಬಡಿದೆಬ್ಬಿಸಿದವು.

ಕಬೀರ್, ಮೀರಾಬಾಯಿ, ಮೀರ್ ಮತ್ತು ಗಾಲಿಬ್ ಕವಿತೆಗಳು ಇಂದು ಉರ್ದು ಸಾಹಿತ್ಯದ ಮೇರು ಕೃತಿಗಳಾಗಿವೆ. ಸಂಗೀತಕಾರ ಹಾಗೂ ಚಿತ್ರ ಸಂಭಾಷಣೆಗಳೊಂದಿಗೆ ಮುಂಬೈ ಚಿತ್ರಜಗತ್ತಿನೊಂದಿಗೆ ಸಂಪರ್ಕ ಇರಿಸಿದ್ದ ಸಂಗಾತಿ ಜಫ್ರಿ ತಮ್ಮ ಸಾಂಸ್ಕೃತಿಕ ಕೊಡುಗೆಗಳ ಮೂಲಕ ಸಮಕಾಲೀನ ಜಗತ್ತಿನ ಶ್ರೇಷ್ಠ ಸಾಹಿತಿಗಳಾದ ನಜೀಮ್ ದಿಕ್ಷತ್, ಪಾಬ್ಲೊ ನೆರೂದ, ಇಲಿಯಾ ಎರೋನ ಬರ್ಗ ಮತ್ತು ಫೈಜ್ ಅಹ್ಮದ್ ಫೈಜ್ ಅವರೊಂದಿಗೆ ತಮ್ಮನ್ನು ಗುರುತಿಸಲ್ಪಟ್ಟವರು.

ಹಲವಾರು ಸ್ಮರಣೀಯ ಸಾಕ್ಷ್ಯ ಚಿತ್ರಗಳು, ಮಕ್ಕಳ ಚಿತ್ರಗಳ ನಿರ್ಮಾಣದಲ್ಲಿ ತೊಡಗಿಸಿಕೊಂಡ ಜಫ್ರಿಯವರ ಬಹುಮುಖ ಪ್ರತಿಭೆ ಅಗಣಿತ. ಸಾಹಿತ್ಯ ಕೊಡುಗೆಗೆ 1998 ರಲ್ಲಿ ಜ್ಞಾನಪೀಠ ಪ್ರಶಸ್ತಿ ನೀಡಿ ಅವರನ್ನು ಗೌರವಿಸಲಾಯಿತು. ○

......ಹೆಡೆ ಎತ್ತುತ್ತಿರುವ ಭೂಮಾಲಕ ಕ್ರೌರ್ಯ

ಪುಟ 2 ರಿಂದ

ಹರಿಬಿಟ್ಟಿರುವ ಹಿಂಸಾಚಾರಕ್ಕೆ ರಾಜಕೀಯ ಬಣ್ಣ ಬಳಿದು ರಾಜ್ಯದಲ್ಲಿನ ಎಡರಂಗ ಸರ್ಕಾರವನ್ನು ಕಿತ್ತುಹಾಕಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೆ ತರುವಂತೆ ತೃಣಮೂಲ ಕಾಂಗ್ರೆಸ್ ಎನ್‌ಡಿಎ ಸರ್ಕಾರವನ್ನು ಒತ್ತಾಯಿಸುತ್ತಿದೆ.

ಬಿರ್‌ಭೂಮ್ ಘಟನೆಯಲ್ಲಿ ಸತ್ತವರೆಲ್ಲರೂ ಅಲ್ಪಸಂಖ್ಯಾತರೆಂದು ಪ್ರಚಾರಮಾಡುವ ಮೂಲಕ ಎಡರಂಗ ಸರ್ಕಾರದ ವಿರುದ್ಧ ಅಲ್ಪಸಂಖ್ಯಾತರ ಭಾವನೆಗಳನ್ನು ಕೆರಳಿಸುವ ವ್ಯವಸ್ಥಿತ ಪ್ರಯತ್ನವೂ ನಡೆದಿದೆ. ಎಡರಂಗ ಸರ್ಕಾರವು ಜಾರಿಗೆ ತಂದಿರುವ ಭೂಸುಧಾರಣೆಗಳ ಮೂಲಕ ಭೂಮಿ ಪಡೆದುಕೊಂಡ ಫಲಾನುಭವಿಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಭೂಹೀನರು ಇದ್ದಾರೆ ಎಂಬ ಅಂಶವನ್ನು ಮಾತ್ರ ಮುಚ್ಚಿಡಲಾಗುತ್ತಿದೆ. ಅಲ್ಪಸಂಖ್ಯಾತ ಕೋಮಿನ ಭೂಮಾಲಕರು ತಮ್ಮ ಕೋಮಿನ ಅಸಂಖ್ಯಾತರ ಭೂಹೀನರಿಗೆ ಭೂಮಿಯ ಹಕ್ಕು ದೊರೆತಿರುವುದನ್ನು ಏಕೆ ಸಹಿಸುವುದಿಲ್ಲ?

ಭೂಮಾಲಕರು ಅಲ್ಪಸಂಖ್ಯಾತರ ಕೋಮಿಗೆ ಸೇರಿದವರಾಗಲಿ ಬಹುಸಂಖ್ಯಾತ ಕೋಮಿಗೆ ಸೇರಿದವರಾಗಲಿ, ಅವರ ವರ್ಗಗುಣಗಳು ದಮನಕಾರಿಯೇ ಆಗಿರುತ್ತವೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತಿದೆ. ಅವರ ವರ್ಗಹಿತಗಳು ಒಂದೇ ಆಗಿರುವುದರಿಂದ ಕೂಲಿಕಾರರ ಮತ್ತಿತರ ದುಡಿಯುವ ಜನಗಳ ಪರವಾದ ಒಂದು ಸರ್ಕಾರದ ವಿರುದ್ಧ ಅವರೆಲ್ಲರೂ ಒಂದಾಗುತ್ತಾರೆ ಎಂಬುದು ಪಶ್ಚಿಮ ಬಂಗಾಳದ ಈ ಚಳುವಳಿಗಳು ಸ್ಪಷ್ಟಪಡಿಸುತ್ತವೆ.

'ಉಳುವವನೇ ಭೂಮಿಯ ಒಡೆಯ' ಎಂಬ ಘೋಷಣೆಯನ್ನು ಜಾರಿಗೆ ತರಲು ಕಾಂಗ್ರೆಸ್ ಸರ್ಕಾರಗಳು ಒಪ್ಪದಿದ್ದಾಗ ಭೂಮಾಲಕ ಪದ್ಧತಿಯ ರದ್ದತಿಗಾಗಿ ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿದ್ದ ಎಡ ಪಕ್ಷಗಳನ್ನು ಪಶ್ಚಿಮ ಬಂಗಾಳದ ಜನತೆ ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ಒಂದು ಇತಿಹಾಸವನ್ನೇ ನಿರ್ಮಿಸಿತು. ಜನತೆಯು ನೀಡಿದ ಅಧಿಕಾರವನ್ನು ಉಪಯೋಗಿಸಿಕೊಂಡ ಎಡರಂಗ ಸರ್ಕಾರವು ಕ್ರಾಂತಿಕಾರಿ ಭೂಸುಧಾರಣೆಗಳನ್ನು ಜಾರಿಗೆ ತಂದು ರಾಜ್ಯದ ಅಭಿವೃದ್ಧಿಗೆ ಭದ್ರ ತಳಪಾಯವನ್ನು ಹಾಕಿತು. ಲಕ್ಷಾಂತರ ಭೂಹೀನ ಕೃಷಿಕೂಲಿಕಾರ ಹಾಗೂ ಲಾವಣಿದಾರ ಕುಟುಂಬಗಳ ಬಾಳು ಬೆಳಗಿತು. ಸತತ ಬರಗಾಲಕ್ಕೆ ತುತ್ತಾಗುತ್ತಾ, ಹಸಿವೆಯಿಂದ ಜನರು ಸಾಯುತ್ತಿದ್ದ ಈ ರಾಜ್ಯದಲ್ಲಿ ಎಡರಂಗ ಸರ್ಕಾರದ ಭೂಸುಧಾರಣಾ ಕ್ರಮದಿಂದ ಅಸಂಭವವೆನಿಸಿದ್ದು ಸಂಭವಿಸಿತು. ಆಹಾರ ಉತ್ಪಾದನೆಯಲ್ಲಿ ಪಶ್ಚಿಮಬಂಗಾಳ ಸ್ವಾವಲಂಬನೆಯನ್ನು ಸಾಧಿಸಿತು. ಮಾತ್ರವಲ್ಲದೆ, ಪರರಾಜ್ಯಗಳಿಗೆ ಅಕ್ಕಿ, ಗೋಧಿ ಮೊದಲಾದ ದಾನ್ಯಗಳನ್ನು ಒದಗಿಸುವ ಸಾಮರ್ಥ್ಯವನ್ನು ಪಡೆಯುವಂತಾಯಿತು. ಗ್ರಾಮೀಣ ಜನಸಾಮಾನ್ಯರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಯಿತು ಮತ್ತು ಆ ಮೂಲಕ ಸ್ಥಳೀಯ ಮಾರುಕಟ್ಟೆ ಅಭಿವೃದ್ಧಿಯಾಯಿತು. ಇದು ಪರೋಕ್ಷವಾಗಿ ಕೈಗಾರಿಕೆಗಳ ಕುಸಿಯುವಿಕೆಯನ್ನು ಸಾಕಷ್ಟು ಮಟ್ಟಿಗೆ ತಡೆ ಹಿಡಿಯಿತು.

ಕಳೆದ ಇಪ್ಪತ್ತಕ್ಕೂ ಹೆಚ್ಚು ವರ್ಷಗಳಿಂದ ಪಶ್ಚಿಮ ಬಂಗಾಳ ಅಭಿವೃದ್ಧಿಯತ್ತ ನಿಧಾನವಾದ ಆದರೆ ದೃಢವಾದ ಹೆಜ್ಜೆಗಳನ್ನು ಇಡುತ್ತಾ ಬಂದಿದೆ. ಎಲ್ಲಾ ಗ್ರಾಮಗಳಿಗೆ ಕುಡಿಯುವ ಶುದ್ಧ ನೀರಿನ ಪೂರೈಕೆ ಮಾಡಿದೆ. ಆಹಾರ ಉತ್ಪಾದನೆಯ ಜೊತೆಯಲ್ಲಿ ಮೀನು ಸಾಕಾಣಿಕೆಗೆ ಭಾರೀ ಪ್ರೋತ್ಸಾಹ ನೀಡುವ ಮೂಲಕ ಬಡವರಿಗೆ ಆಹಾರದ ಕೊರತೆಯಾಗುವುದನ್ನು ಸಂಪೂರ್ಣ ನಿಲ್ಲಿಸಿದೆ. ಪದವಿ ಪೂರ್ವ ಮಟ್ಟದವರೆಗೆ ಉಚಿತ ಶಿಕ್ಷಣ ಮಾತ್ರವಲ್ಲ ಉಚ್ಚ ಶಿಕ್ಷಣದ ಕೋರ್ಸುಗಳಿಗೆ ದೇಶದಲ್ಲೇ ಅತ್ಯಂತ ಕಡಿಮೆ ಶುಲ್ಕವನ್ನು ನಿಗದಿ ಮಾಡುವ ಮೂಲಕ ಬಡ ಹಾಗೂ ಮಧ್ಯಮ ವರ್ಗಗಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯನ್ನು ಖಚಿತಪಡಿಸಿದೆ. ಕೇಂದ್ರ ಸರ್ಕಾರದ ಅಸಹಕಾರವನ್ನು ಗಣನೆಗೆ ತೆಗೆದುಕೊಳ್ಳದೆ ಹಾಲ್ದಿಯಾ ಪೆಟ್ರೋ ಕೆಮಿಕಲ್ಸ್ ಬೃಹತ್ ಯೋಜನೆಯನ್ನು ರೂಪಿಸುವ ಮೂಲಕ ರಾಜ್ಯದಲ್ಲಿ ಲಕ್ಷಾಂತರ ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಿದೆ. ಆದರೆ ಕೇಂದ್ರದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರಗಳಾಗಲಿ ಈಗ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವಾಗಲೀ ಪಶ್ಚಿಮ ಬಂಗಾಳವು ಎಡರಂಗ ಸರ್ಕಾರದ ಅಡಿಯಲ್ಲಿ ಸಾಧಿಸಿದ ಪ್ರಗತಿಯನ್ನು ಸ್ವಾಗತಿಸುವ ಸೌಜನ್ಯವನ್ನು ಸಹ ತೋರಿಸಲಿಲ್ಲ ಮಾತ್ರವಲ್ಲ ರಾಜ್ಯ ಸರ್ಕಾರಕ್ಕೆ ನೀಡಬೇಕಾದ ಹಣಕಾಸನ್ನು ನೀಡುವ ವಿಷಯದಲ್ಲಿ ತಾರತಮ್ಯ ಮಾಡುತ್ತಾ ಬರಲಾಗುತ್ತಿದೆ. ಜನರನ್ನು ಎಡರಂಗ ಸರ್ಕಾರದ ವಿರುದ್ಧ ತಿರುಗಿಸಲು ಈ ಯಾವ ಕುತಂತ್ರಗಳಿಂದಲೂ ಸಾಧ್ಯವಾಗದಿದ್ದಾಗ ಜನರ ನಡುವೆ ಗಲಭೆಗಳನ್ನು ಹುಟ್ಟುಹಾಕಿ ಅದರ ರಾಜಕೀಯ ಲಾಭಪಡೆಯಲು ಪ್ರಯತ್ನ ಪಡಲಾಗುತ್ತಿದೆ. ಗಲಭೆಗಳನ್ನು ಹುಟ್ಟುಹಾಕುವುದರಲ್ಲಿ ನಿಸ್ಸೀಮವಾಗಿರುವ ಬಿಜೆಪಿ ಹಾಗೂ ಶಿವಸೇನೆಯಂತಹ ಗೂಂಡಾಗಿರಿಗೆ ಹೆಸರುವಾಸಿಯಾಗುತ್ತಿರುವ ಮಮತಾ ಬ್ಯಾನರ್ಜಿ ಪಡೆಗೆ ಹೊಂದಾಣಿಕೆಯಾಗಿರುವುದು ಆಶ್ಚರ್ಯದ ಸಂಗತಿಯಲ್ಲ.

ಹತಾಶ ಭೂಮಾಲಕ ಶಕ್ತಿಗಳು ಲೇಡಿ ಠಾಕ್ರೆಯಂತೆ ವರ್ತಿಸುತ್ತಿರುವ ಮಮತಾ ಬ್ಯಾನರ್ಜಿಯವರ ಆಶ್ರಯ ಪಡೆಯುತ್ತಿರುವುದು ಇನ್ನೊಂದು ಬೆಳವಣಿಗೆ. ಭೂಸುಧಾರಣೆಗಳ ಯಶಸ್ವಿ ಅನುಷ್ಠಾನದ ನಂತರವೂ ಇಲ್ಲಿ ಭೂಮಾಲಕ ವರ್ಗ ಸಂಪೂರ್ಣ ನಾಶವಾಗಿಲ್ಲ. ಅವರ ಹಿಡಿತದಲ್ಲಿ ಉಳಿದಿರುವ ಭೂಮಿಯ ಆದಾಯವನ್ನು ಬಳಸಿಕೊಂಡು ಎಡರಂಗ ಸರ್ಕಾರವನ್ನು ಅಸ್ಥಿರಗೊಳಿಸಲು ಈ ಶಕ್ತಿಗಳು ಒಂದಾಗುತ್ತಿವೆ. ಇನ್ನೊಂದು ಹಂತದ ಭೂಸುಧಾರಣೆಗೆ ಎಡರಂಗ ಸರ್ಕಾರ ಪ್ರಯತ್ನ ಪಟ್ಟಿದ್ದರೂ ಕೇಂದ್ರ ಸರ್ಕಾರದ ವಿರೋಧದಿಂದಾಗಿ ರಾಷ್ಟ್ರಪತಿ ಒಪ್ಪಿಗೆ ದೊರಕದಂತಾಗಿದೆ. ಬಂಡವಾಳಶಾಹಿ ಭೂಮಾಲಕ ಪ್ರಭುತ್ವದ ಒಳಗಡೆ ಒಂದು ರಾಜ್ಯದಲ್ಲಿ ಸೀಮಿತ ಕಾರ್ಯಕ್ರಮದೊಂದಿಗೆ ಎಡಪಕ್ಷಗಳ ಒಂದು ಸರ್ಕಾರ ನಡೆಸುವುದು ಎಷ್ಟು ಕಷ್ಟಕರವಾಗಿದೆ ಎಂಬುದನ್ನು ದೇಶದ ಎಲ್ಲಾ ಪ್ರಗತಿಪರ ಶಕ್ತಿಗಳು ಮನಗಾಣಬೇಕಾಗಿದೆ ಮತ್ತು ಇಂದಿನ ಕ್ಲಿಷ್ಟಕರ ಸನ್ನಿವೇಶದಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಬೇಕಾಗಿದೆ. ಅತ್ಯಂತ ಸೀಮಿತ ಅವಕಾಶಗಳೊಂದಿಗೆ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಸಾಧಿಸಿದ



ಭೂಮಿ ಮೇಲಿನ ಹಕ್ಕಿನ ರಕ್ಷಣೆಯಲ್ಲಿ ಮಕ್ಕಳು ಮತ್ತು ಮಹಿಳೆಯರು

ಸಾಧನೆಗಳನ್ನು ಜನತೆಯ ಮುಂದಿಡುವ ಮೂಲಕ ಎಡರಂಗ ಸರ್ಕಾರದ ವಿರುದ್ಧ ನಡೆಸಲಾಗುತ್ತಿರುವ ವ್ಯವಸ್ಥಿತ ಅಪಪ್ರಚಾರಕ್ಕೆ ಮರು ಉತ್ತರ ನೀಡಬೇಕಾಗಿದೆ.

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ